ನಾರಾಯಣಂ ನಮಸ್ಕೃತ್ಯ ನರಂಚೈವ ನರೋತ್ತಮಂ ।
ದೇವೀಂ ಸರಸ್ವತೀಂವ್ಯಾಸಂ ತತೋಜಯಮುದೀರಯೇತ್ ॥
ಓಂ ಲಕ್ಷ್ಮೀನಾರಾಯಣಂ ನತ್ವಾ ಪೂರ್ಣಬೋಧಾನ್ಸುಗುರೂನಪಿ ।
ಕುರ್ಮಃ ಶ್ರೀಕೃಷ್ಣ ಗೀತಾಯಾಭಾಷ್ಯಾದ್ಯುಕ್ತಾರ್ಥಸಂಗ್ರಹಮ್ ॥

ಶ್ರೀ ಗುರುಭ್ಯೋ ನಮಃ

# ಭಗವದ್ಗೀತ

## ವಿಮರ್ಶಾತ್ಮಕ ಸಮೀಕ್ಷೆ



ಸಂಗ್ರಹ / ನಿರೂಪಣೆ
ಪ್ರೊ॥ ಬದರೀನಾಥಾಚಾರ್ ಘೂಳಿ ಎಂ.ಎ.

SHREE BHAGAVADGEETHA Compiled and Edited by Prof. Badarinathacharya Ghooli M.A., Retired Professor and Published by Madhava Madhwa Prakashana No. 164, "Soudamini" 7th Cross, 9th Main, BEML Layout, Rajarajeshwarinagar, Bangalore-560 089
Phone : 080-28602191

First Edition : Sept. 2009

© Prof. Badarinathachar Ghooli

Typesetting by
**Sri Raghavendra Enterprises**
BSK 1st Stage, Bangalore-560 050
Phone : 22421294

ಹರಿಃ ಓಂ

ಅನಂತಚಿತ್ಸುಖಾರ್ಣವಃ ಸದೋದಿತ್ಯೈಕ ರೂಪಕಃ ।
ಸಮಸ್ತ ದೋಷವರ್ಜಿತೊ ಹರಿರ್ಗಣಾತ್ಮಕಃಸದಾ ॥

# ಶ್ರೀ ಭಗವದ್ಗೀತೆ

## (ವಿಮರ್ಶಾತ್ಮಕ ವಿವರಣೆ)

### ಗೀತಾ ಪ್ರಾಮಣ್ಯತೆ

ಶ್ರೀಮದ್ಭಗವದ್ಗೀತೆಯನ್ನು ಸಾಕ್ಷಾತ್ ವೇದವ್ಯಾಸ ದೇವರೇ ರಚಿಸಿದರು. ಇದು ನಿರ್ವಿವಾದ. ವೇದವ್ಯಾಸ ದೇವರು ಶ್ರೀಮನ್ನಾರಾಯಣನ ಅವತಾರವೆಂಬುದು ಸುಪ್ರಸಿದ್ಧ **ವ್ಯಾಸಂ ನಾರಾಯಣಂ ವಿದ್ಧಿ** ಅಂದಾಗ **ಪರಮಾತ್ಮ**ನೇ **ವ್ಯಾಸತ್ವೇನ** ಅವತಾರ ಮಾಡಿ ಕೇವಲ ಜ್ಞಾನ ಪ್ರಾಚಾರ್ಯಕ್ಕಾಗಿ ಪ್ರಾದುರ್ಭವಿಸಿದರು. ಅಂದ ಮೇಲೆ ಶ್ರೀಶನು ತಾನು ರಚಿಸಿದ ಕೃತಿಯಲ್ಲಿ ವಂಚನೆ ಮಾಡುವ ಪ್ರಸಂಗವೇ ಬರುವುದಿಲ್ಲ. ತಸ್ಮಾತ್ ಭಗವದ್ಗೀತೆ ಅತ್ಯಂತ ಶ್ರೇಷ್ಠ ಪ್ರಮಾಣ. ಹೀಗಿದ್ದರೂ **ವೇದಾಂತ ದೇಶಿಕರ** ಅಭಿಪ್ರಾಯದಂತೆ ವೇದವ್ಯಾಸರು ಕಸ್ಚನ ಋಷಿ. ಭಗವಂತನ ಅವತಾರವೆಂದು ಸಮ್ಮತಿಸುವುದಿಲ್ಲ. ವ್ಯಾಸರೂ ಸಹ ಮಾನವರಂತೆ ಕುಂದು ಕೊರತೆ ದೋಷಗಳಿಗೆ ಭಾಗವಾಗಿದ್ದರು ಎಂದು ಹೇಳುತ್ತಾರೆ. ಆದರೆ **ಆಚಾರ್ಯ ಶ್ರೀಮಧ್ವರು** ಅನೇಕ ಪ್ರಮಾಣಗಳಿಂದ ಶ್ರೀಮನ್ನಾರಾಯಣನೇ ವೇದವ್ಯಾಸರು ಎಂದು ಸಾಧಿಸಿ ಸಿದ್ಧಪಡಿಸಿರುತ್ತಾರೆ. ವ್ಯಾಸ ಮಹಾಋಷಿಗಳು ಪ್ರಸ್ತುತ ಭಗವದ್ಗೀತೆಯನ್ನು ರಚಿಸಿದರು.

### ಗೀತೆಯ ವೈಶಿಷ್ಟ್ಯತೆ

ಭಗವದ್ಗೀತೆಯು ಜಗತ್ತಿನಲ್ಲಿ ಎಲ್ಲಾ ವರ್ಗದವರಿಂದಲೂ ಅಧ್ಯಾಪನೆ ಆದರವನ್ನು ಹೊಂದಿದೆ. ಇಷ್ಟೊಂದು ಲೋಕವಿಖ್ಯಾತ ಒಂದು ಆಧ್ಯಾತ್ಮಿಕ ಕೃತಿ ಬೇರೊಂದು ಗ್ರಂಥದಲ್ಲಿ ಕಾಣಲಾಗದು. ಒಬ್ಬ ಪಾಶ್ಚಿಮಾತ್ಯ ದಾರ್ಶನಿಕನ ಪ್ರಕಾರ There is no Library in the world that does not contain a single copy of Geetha. It is universally respected as an Eternal work. ಜಗತ್ತಿನಲ್ಲಿ ಯಾವುದೇ ಗ್ರಂಥಾಲಯವಾಗಲಿ ಭಗವದ್ಗೀತೆಯ ಒಂದಾದರೂ ಪ್ರತಿ ಇದ್ದೇ ಇರುತ್ತೆ. ಗೀತೆಯು ನೋಡಲು ಚಿಕ್ಕ ಗ್ರಂಥವೆಂಬಂತೆ ತೋರುವುದು. ಆದರೆ ವಿಷಯ ಸಮರ್ಥನೆ ಚಿಂತನೆ ಪ್ರತಿಪಾದನೆಯಲ್ಲಿ ಇದಕ್ಕೆ ಸಾಟಿಯೇ ಇಲ್ಲದ ಮಹಾಕೃತಿ. ಇಷ್ಟೊಂದು ಮಹತ್ವವನ್ನು ಹೊಂದಿದೆ. ಇತ್ತೀಚೆಗೆ ಒಂದು ಇಸ್ಲಾಮಿಯರ ಏಕೈಕ TV Channel ಆದ QTVಯಲ್ಲಿ ಗೀತೆಯ ಬಗ್ಗೆ 5 ದಿನಗಳು ಪ್ರವಚನ ನಡೆಯಿತು. ಗೀತೆಯ ಮಹಾತ್ಮ್ಯದ ಬಗ್ಗೆ **ಶ್ರೀಮನ್ಮಹಾಭಾರತ ಭೀಷ್ಮಪರ್ವದ 430**ನೇ ಅಧ್ಯಾಯದಲ್ಲಿ ಉಲ್ಲೇಖವಿದೆ. **ಶ್ರೀವೈಶಂಪಾಯನರು ಹೇಳುತ್ತಾರೆ.**

**ಗೀತಾಸುಗೀತಾ ಕರ್ತವ್ಯ ಕಿಮನ್ಯೈಃ ಶಾಸ್ತ್ರಸಂಗ್ರಹೈಃ ।**
**ಯಾ ಸ್ವಯಂ ಪದ್ಮನಾಭಸ್ಯ ಮುಖಪದ್ಮಾತ್‌ವಿನಿಃಸೃತಾ ।**
**ಸರ್ವಶಾಸ್ತ್ರಮಯೀ ಗೀತಾ ಸರ್ವದೇವಮಯೋಹರಿಃ ।**
**ಸರ್ವತೀರ್ಥಮಯೀ ಗಂಗಾ ಸರ್ವವೇದಮಯೋಮನುಃ ॥**

ಪುರಾಣ ಭಾರತ ಭಾಗವತಾದಿ ಗ್ರಂಥಗಳು ಒಬ್ಬ ವಕ್ತಾರರಿಂದ, ಮಹಾಭಾರತವು ವೈಶಂಪಾಯನರಿಂದ ಜನ್ಮೇಜಯರಾಯನಿಗೆ, ಭಾಗವತವು ಶುಕಾಚಾರ್ಯರಿಂದ ಪರೀಕ್ಷಿತ ರಾಜನಿಗೆ 18 ಪುರಾಣಗಳು ಸೂತಾಚಾರ್ಯರಿಂದ ಉಪದೇಶಿಸಲ್ಪಟ್ಟಿದೆ. ಆದರೆ **ಗೀತೆಶಾಸ್ತ್ರವು ಸಾಕ್ಷಾತ್** ಭಗವಂತನಾದ ಪದ್ಮನಾಭನೇ ಸ್ವಯಂ ಅರ್ಜುನವೆಂಬ ಜೀವನನ್ನು ನಿಮಿತ್ತ ಮಾಡಿ ತನ್ನ ಮುಖಾರವಿಂದದಿಂದ ಬಂದ ಅಮೃತವು ಇದು ಸಮಸ್ತ ವೇದಸಾರವೂ ಹೌದು. ಗಂಗಾಸ್ನಾನಕ್ಕೆ ಸಮಾನವಾದುದು. “Geetha is a practical philosophy” ಅಂತ ವರ್ಣಿತವಾಗಿದೆ. **(ಪ್ರಸ್ಥಾನತ್ರಯುಗಳಾದ ಸೂತ್ರ ಪ್ರಸ್ಥಾನ, ಉಪನಿಷತ್ಪ್ರಸ್ಥಾನ ಹಾಗೂ ಗೀತಾಪ್ರಸ್ಥಾನವೆಂದು ಪ್ರಸಿದ್ಧ.)**

**ಗೀತೆಯು ಒಂದು ಸ್ವತಂತ್ರ ಗ್ರಂಥವಲ್ಲ.** ಇದು ಶ್ರೀಮನ್ಮಹಾಭಾರತ ಅಂತರ್ಗತವಾದದ್ದು. ಶ್ರೀಮನ್ಮಹಾಭಾರತ ಕರ್ತೃ ಯಾರು ಎಂದು ತಿಳಿದರೆ ಅದರಲ್ಲಿ ಅಡಕವಾಗಿರುವ ಜೇನುತುಪ್ಪವನ್ನು ಸವಿಯಬಹುದು. ಈ ಹಿಂದೆ ತಿಳಿಸಿದಂತೆ ಶ್ರೀಮನ್ನಾರಾಯಣನೇ ವ್ಯಾಸರೂಪದಿಂದ ಅವತರಿಸಿ ಶ್ರೀಮಹಾಭಾರತವನ್ನು ರಚಿಸಿದರು. ವೇದಗಳು ಅನಾದಿನಿತ್ಯ ಯುಗಗಳಿಂದಲೂ ಅವ್ಯಾಹತವಾಗಿ ಯಾವ ಬದಲಾವಣೆ ಇಲ್ಲದೇ ಇರುವ ವೇದಗಳಿಗೆ, ಕಾಲಗತಿಸಿದಂತೆ ಕೆಲವರು ಅಪಾರ್ಥ ಬರೆದರು. ಹೀಗಾಗಿ ನಿಜವಾದ ಜ್ಞಾನ ತಿರೋಹಿತವಾಯಿತು. ಆಗ ಸಜ್ಜನರಲ್ಲಿ ಅನುಕಂಪ ತೋರಿ ಶ್ರೀವೇದವ್ಯಾಸರು ಅನಂತ ವೇದಗಳನ್ನು ವಿಂಗಡಿಸಿ ವಿಭಾಗಗಳನ್ನಾಗಿ ಮಾಡಿ ಋಗ್, ಯಜು, ಸಾಮ, ಅಥರ್ವಣವೆಂದು ನಾಲ್ಕು ಭಾಗಗಳನ್ನಾಗಿ ಮಾಡಿ ಇದರಿಂದ ಸಮೀಚೀನ ಅರ್ಥ ಆಗಬಹುದೆಂದು ತಿಳಿದರು. ಆದರೂ ಇವುಗಳ ನಿಜಾರ್ಥ ತಿಳಿಯದಿರುವಾಗ, ವೇದಾರ್ಥ ನಿರ್ಣಾಯಕ **ಬ್ರಹ್ಮಸೂತ್ರಗಳನ್ನೂ** ರಚಿಸಿದರು. ಕೆಲ ದುಷ್ಟ ಜನರು ಸೂತ್ರಗಳಿಗೂ ಅಪಾರ್ಥ ಬರೆದು ಸಜ್ಜನರಿಗೆ ಇವುಗಳಿಂದ ಯಾವುದೂ ಸಮೀಚೀನ ಅರ್ಥ ಆಗದೇ **ಇದೋವಾ ಅದೋವಾ** ಎಂಬ ಸಂಶಯ ಬಂದಿತು. ಅದೂ ಅಲ್ಲದೇ ಮೂರು ವರ್ಣದವರಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಇವರಿಗೇನೇ ವೇಧಾಧ್ಯಯನ ಅಧಿಕಾರಿಗಳೆಂದು ಶೂದ್ರಾದಿಗಳು ವೇದಾಧ್ಯಯನ ಮಾಡಬಾರದೆಂಬ ನಿಯಮದ ಪ್ರಕಾರ ಅವರಲ್ಲಿಯೂ ಸಜ್ಜನರು ಭಗವದ್ಭಕ್ತರೂ ಇರುವುದನ್ನು ಗಮನಿಸಿ ಈ ವರ್ಗದವರೂ ಹೇಗೆ ಉದ್ಧಾರ ಹೊಂದಿಯಾರು ಎಂದು ಯೋಚಿಸಿ,



(ತ್ರೈವರ್ಣಿಕಾನಾಂ ವೇದೋಕ್ತೇ ಸಮ್ಯಕ್ ಭಕ್ತಿಮತಾಂ ಹರೌ ಅಧಿಕಾರಃ) (ಸ್ಕಾಂದ)
**ಶ್ರೀಸೂದ್ರ ಬ್ರಹ್ಮ ಬಂಧೂನಾಂ ತ್ರಯಿ ಶ್ರುತಿ ನಗೋಚರಾ।**
**ಇತಿ ಭಾರತಮಾಖ್ಯಾತಂ ಕೃಪಯಾ ಮುನಿನಾಕೃತಃ ॥**

ಎಂದು ಭಗವಾನ್ ವೇದವ್ಯಾಸದೇವರು ಸ್ವಯಂ ಸರ್ವವೇದ ಮೀಮಾಂಸಾದಿಗಳಲ್ಲಿ ಉಕ್ತವಾದ ತತ್ವಗಳನ್ನು ಶ್ರೀಮಹಾಭಾರತವೆಂಬ ಬೃಹತ್ ಗ್ರಂಥವನ್ನು ರಚಿಸಿದರು. ಮಹತ್ವಾಚ್ಚಾ ಭಾರವತ್ವಾಚ್ಚ ಮಹಾಭಾರತಮುಚ್ಚತೇ

**ದ್ವೈಪಾಯನೋಷ್ಟ ಪುಟನಿಶೃತಂ ಅಪ್ರಮೇಯಂ ।**
**ಪುಣ್ಯಂ ಪವಿತ್ರಮಥಾ ಪಾಪಹರಂ ಪರಂಚ ॥**
**ಯೋಭಾರತಂ ಸಮಧಿಗಚ್ಛತಿ ವಾಚ್ಯಮಾನಂ ।**
**ಕಿಂತಸ್ಯ ಪುಷ್ಕರ ಜಲೈರಭಿಷೇಚನೇನ ॥**

ದ್ವೈಪಾಯನರ ಮುಖದಿಂದ ಹೊರಟ ಮಹಾಭಾರತವನ್ನು, ಪ್ರಮೇಯ ಪುಂಜಗಳಿಂದ ಕೂಡಿದೆ. ಪುಣ್ಯಸಾಧನವು ಪವಿತ್ರ ಪಾಪಗಳನ್ನು ನಾಶಮಾಡುವುದು ಮತ್ತೂ ಮುಕ್ತಿದಾಯಕವೂ ಹೌದು. ಈ ಗ್ರಂಥವನ್ನು ಯಾರಾದರೂ ಸರಿಯಾಗಿ ಅಧ್ಯಯನ ಮಾಡುತ್ತಾರೋ ಅವರಿಗೆ ಲಭಿಸುವ ಪುಣ್ಯವು ಅನರ್ಘವು. ಪುಷ್ಕರಾದಿ ಪುಣ್ಯನದಿಗಳಲ್ಲೇಕೆ ಸ್ನಾನ ಮಾಡಬೇಕು.

ಇಂತಹ ಸರ್ವೋತ್ಕೃಷ್ಟ ಮಹಾಭಾರತವನ್ನು ಒಂದು ನೂರು ಆಕಳುಗಳನ್ನು ಅವುಗಳಿಗೆ ಅಂದರೆ ಅದರ ಕೊಂಬಿಗೆ ಬಂಗಾರದ ಬಳೆ ತೊಡಿಸಿ ವೇದವೇದ್ಯ ಉತ್ತಮ ಬ್ರಾಹ್ಮಣನಿಗೆ ದಾನ ಮಾಡಿದರೆ ಯಾವ ಫಲವು ಲಭಿಸುವುದೋ ಭಾರತ ಗ್ರಂಥ ಶ್ರವಣ ನಿತ್ಯವೂ ಮಾಡುವವನಿಗೆ ನಿಶ್ಚಯವಾಗಿ ಪ್ರಾಪ್ತವಾಗುವುದು ಎಂದಿದೆ.

**ಯೊಗೋಶತಂ ಕನಕ ಶೃಂಗಮಯಂ ದದಾತಿ ।**
**ಎಪ್ರಾಯ ವೇದವಿಧುಷೇ ಚ ಬಹುಶೃತಾಯ ॥**
**ಪುಣ್ಯಾಂ ಚ ಭಾರತ ಕಥಾಂ ಶೃಣು ಯಾಚ್ಚ ನಿತ್ಯಂ ।**
**ತುಲ್ಯಂ ಫಲಂ ಭವತಿ ತಸ್ಯ ಚ ತಸ್ಯಚೈವ ॥**

ಎಂಬ ಪ್ರಮಾಣವಿದೆ. ಅಂದ ಮೇಲೆ ಈ ಗ್ರಂಥವು ಶ್ರೇಷ್ಠ ಪ್ರಮಾಣವು.

ವೇದವ್ಯಾಸರು ರಚಿಸಿದ ಭಾರತವು ಐತಿಹಾಸಿಕವಾಗಿಯೂ ವ್ಯಾಸರು ಕಂಡು ಆಗ ನಡೆಯುತ್ತಿದ್ದ ವರ್ತಮಾನಗಳ ಬಗ್ಗೆ ವಿವರಿಸುವ ಮಹಾಕಥೆ. ಇತಿಹಾಸಕಾರರಿಗೆ ಇದು ದ್ವಾಪರಯುಗದ ನಿತ್ಯ ಜೀವನ ಆಖ್ಯಾಯವಾಗಿರುವುದು. ಕವಿಗಳಿಗೆ ಇದರಲ್ಲಿರುವ ಪಾತ್ರಗಳು ಸಂಗತಿಗಳಿಂದ ಸ್ಫೂರ್ತಿ ಹೊಂದಿರುತ್ತಾರೆ. ತತ್ವಜ್ಞಾನಿಗಳಿಗೆ ಸತ್ಯಾನ್ವೇಷಣದಾಯಕ ವಿಜ್ಞಾನಿಗಳಿಗೆ ಹೊಸತಂತ್ರಗಳ ಪರಿಚಯ ಯುದ್ಧ ಕುಶಲತೆ, ರೀತಿನೀತಿ, ಅಸ್ತ್ರ ಶಸ್ತ್ರಗಳು, ವಿಮಾನಗಳು ನೈಪುಣ್ಯತೆ ರಾಜಕೀಯ ತಂತ್ರ ಕುತಂತ್ರದ ಬಗ್ಗೆ ಇಷ್ಟೊಂದು ಮಾಹಿತಿ ನೀಡುವ ಜಗತ್ತಿನಲ್ಲಿ ಬೇರೊಂದು ಕೃತಿ ಕಾಳಲಾಗದು.

**ವ್ಯಾಸೋಚ್ಛಿಷ್ಟಂ ಜಗತ್ಸರ್ವಂ** ಎಂಬುದು ಅರ್ಥ ಸಹ ಸತ್ಯ.

**ಬ್ರಹ್ಮಸೂತ್ರ**ಗಳ ತಿರುಳನ್ನು ಭಾರತದಲ್ಲಿ ಕಾಣುತ್ತೇವೆ. ವಿಚಿತ್ರವೆಂದರೆ ವೇದವ್ಯಾಸರು ಇದರ ಕರ್ತೃ ಅಷ್ಟೇ ಅಲ್ಲದೆ ಭಾರತದಲ್ಲಿಯ ಪ್ರಮುಖ ಪಾತ್ರ ಹೊಂದಿದ್ದರು. ಕೌರವರು + ಪಾಂಡವರು ವ್ಯಾಸರ ಅನುಗ್ರಹದಿಂದ ಜನಿಸಿದವರು. ಧೃತರಾಷ್ಟ್ರನ ನೂರು ಜನ ಮಕ್ಕಳು ಪಾಂಡುರಾಜನ ಐದು ಜನ ಮಕ್ಕಳು ವ್ಯಾಸರ ಮೊಮ್ಮಕ್ಕಳೇ ಆಗಿದ್ದರು. ಹೀಗೆ ತನ್ನ ಮೊಮ್ಮಕ್ಕಳ ಹುಟ್ಟಿನಿಂದ ಪ್ರಾರಂಭಿಸಿ ಅವರೆಲ್ಲಾ (ಪಾಂಡವರನ್ನು ಹೊರತುಪಡಿಸಿ) ತನ್ನ ಕಣ್ಣು ಮುಂದೆಯೇ ಹತರಾದುದನ್ನು ಪ್ರತ್ಯಕ್ಷ ಕಂಡರು. ಶ್ರೀ ವ್ಯಾಸರು ಮತ್ತು ಶ್ರೀ ಕೃಷ್ಣರು ಭಾರತದ ರಂಗದಲ್ಲಿ ಮೇಲೆ ಮೇಲೆ ಕಾಣಿಸಿಕೊಳ್ಳುತ್ತಾರೆ. ಭಾರತದಲ್ಲಿ ಈ ಈರ್ವರೂ ಅವಿಭಾಜ್ಯ ಪಾತ್ರಗಳು. ಇಂತಹ ಭಾರತವನ್ನು ಕೇಳಿದವರು ಅಸಂಖ್ಯಾತ. ಕೇಳದವರೇ ವಿರಳ ಆದರೂ ಭಾರತವನ್ನು ಸರಿಯಾಗಿ ಅರ್ಥಮಾಡಿಕೊಂಡವರೂ ವಿರಳ. ಇದೇ ರೀತಿಯಾಗಿ ಭಗವದ್ಗೀತೆಗೂ ಅನ್ವಯಿಸುತ್ತದೆ. ಗೀತೆಯ ಬಗ್ಗೆ ಬಹಳಷ್ಟು ಅರ್ಥ ವ್ಯಾಖ್ಯಾನಗಳು ಬರೆದಿದ್ದಾರೆ. ಆದರೆ ಗೀತೆಯ ನಿಜ ಗುಟ್ಟು ಕೃಷ್ಣನ ಹೃದಯವನ್ನು ತಿಳಿದವರೂ ಸಹ ವಿರಳ. ಸಾಕಷ್ಟು ವ್ಯಾಖ್ಯಾನ ಉಪನ್ಯಾಸ ಮಾಡಿ ಬಿರುದಾವಳಿಗಳನ್ನು ಪಡೆದಿರುತ್ತಾರೆ. ವ್ಯಥೆ ಎಂದರೆ ಗೀತೆಯಲ್ಲಿ ನುಡಿದಂತೆ ನಡೆಯುವವರನ್ನು ಕಾಣಲಾಗದು.

ವೇದಗಳಿಗೆ ತದರ್ಥ ತಿಳಿಸುವ ಉಪನಿಷತ್ತುಗಳಿವೆ. ಅದೇ ರೀತಿ ಮಹಾಭಾರತಕ್ಕೆ ಗೀತೆಯು ಉಪನಿಷತ್ತೆ ಇದ್ದಂತೆ. ಪ್ರತಿ 18 ಅಧ್ಯಾಯಗಳ ಕೊನೆಯಲ್ಲಿ **"ಓಂ ತತ್ಸದಿತಿ ಶ್ರೀಮದ್ಭಗವದ್ಗೀತಾಸು ಉಪನಿಷತ್ಸು"** ಎಂದಿರುವುದೇ ಸಾಕ್ಷಿ.

ಮಹಾಭಾರತವು ದೊಡ್ಡ ಗಾತ್ರದ ಮೇರು ಪರ್ವತವಾದರೆ ಇದರ ಎರಡು ಮುಖ್ಯ ಶೃಂಗಗಳು **ಭಗವದ್ಗೀತಾ** ಮತ್ತು **ವಿಷ್ಣುಸಹಸ್ರನಾಮ.**

**ಆಚಾರ್ಯ ಶ್ರೀಮಧ್ವರು** ಭಾರತಕ್ಕೆ ಹತ್ತು ಅರ್ಥಗಳಿರುವುದಾಗಿ, ಎಂದು ಅದೇ ರೀತಿ ವಿಷ್ಣುಸಹಸ್ರನಾಮದ ಪ್ರತಿಯೊಂದು ನಾಮಕ್ಕೂ ನೂರು ಅರ್ಥಗಳಿರುವುದೆಂದು ತೋರಿಸಿಕೊಟ್ಟಿದ್ದಾರೆ.

ಮನುಷ್ಯನಾದವನು ಪುನಃ ಜನ್ಮರಹಿತನಾಗಬೇಕಾದರೆ ಜೀವನದಲ್ಲಿ **ನಾಲ್ಕು ಗಕಾರಗಳನ್ನು** ಅಳವಡಿಸಿಕೊಳ್ಳಬೇಕೆಂದು ಭಾರತವು ಹೇಳುತ್ತಿದೆ.

**ಗೀತಾ ಗಂಗಾ ಚ ಗಾಯಿತ್ರಿ ಗೋವಿಂದೇತಿ ಹೃದಿಸ್ಥಿತೇ ।**
**ಚತುರ್ಗಕಾರ ಸಂಯುಕ್ತೆ ಪುನರ್ಜನ್ಮನವಿದ್ಯತೇ ॥**

ಗೀತೆಯಲ್ಲಿ **701** ಶ್ಲೋಕಗಳಿರುವುದೆಂದು **ಶ್ರೀಮದಾಚಾರ್ಯರು,** ಶ್ರೀಜಯತೀರ್ಥರು ಮತ್ತು ಶ್ರೀಮದ್ರಾಘವೇಂದ್ರ ಗುರುರಾಜರು ತಿಳಿಸಿರುತ್ತಾರೆ.



## ಭಗವದ್ಗೀತೆಯಲ್ಲಿ ಎಷ್ಟು ಶ್ಲೋಕಗಳಿವೆ ?

ಶ್ರೀ ಶಂಕರಾಚಾರ್ಯರು ತಾವು ಬರೆದ ಗೀತಾ ಭಾಷ್ಯದಲ್ಲಿ
**"ತಂ ಧರ್ಮಂ ಭಗವತೇ ಯಥೋಪದಿಷ್ಟಂ ।**
**ವೇದವ್ಯಾಸಃ ಸರ್ವಜ್ಞೋ ಭಗವಾನ್ ಗೀತಾಖ್ಯೈಃ ॥**
**ಸಪ್ತಭಿಃ ಶ್ಲೋಕಶತೈರುಪನಿಭ ಬಂಧ"**

ಅಂದರೆ ಭಗವಂತನಿಂದ ಉಪದಿಷ್ಟರಾಗಿ ಸರ್ವಜ್ಞರಾದ ಭಗವಾನ್ ವ್ಯಾಸರು ಗೀತೆ ಎಂಬ ಕೃತಿಯಲ್ಲಿ 7 ಮತ್ತು 100 ಶ್ಲೋಕಗಳಲ್ಲಿ (700) ರಚಿಸಿದರು ಎಂದಿದೆ. ಈ ಶ್ಲೋಕದಿಂದ ಎರಡು ಅರ್ಥ ಹೊರಡುತ್ತಿದೆ.

ಭಗವಂತನು ವೇದವ್ಯಾಸರಿಗೆ ಗೀತೆ ಉಪದೇಶ ಮಾಡಿ, ಅದನ್ನೆ **ಭಗವದ್ಗೀತೆ** ಎಂಬ ಕೃತಿಯನ್ನು ರಚಿಸುವಂತೆ ಹೇಳಿದನೆಂದು, ಇನ್ನೊಂದು ವಿಷಯ ಗೀತೆಯಲ್ಲಿ 700 ಶ್ಲೋಕಗಳಿರುವುದಾಗಿ ಹೇಳಿಕೊಂಡಿದ್ದಾರೆ. ಅವರ ಮಾತಿಗೆ ಗೋರಖ್‌ಪುರ್ ಗೀತಾ ಪ್ರೆಸ್‌ನವರು ಪ್ರಕಟಿಸಿದ ಶ್ರೀಮನ್ಮಹಾಭಾರತ ಭೀಷ್ಮ ಪರ್ವದ ಪಂಚವಿಶೋಧ್ಯಾಯದಿಂದ ಗೀತಾ ಪ್ರಾರಂಭವಾಗಿ ದ್ವಿ ಚತ್ಯಾರಿಂಶೋಧ್ಯಾಯದ ಪ್ರಕಾರ 700 ಶ್ಲೋಕಗಳಿರುವುದಾಗಿ ತೋರಿಸುತ್ತಾರೆ.

ಶ್ರೀರಾಮಾನುಜಾಚಾರ್ಯರ ಭಾಷ್ಯದಲ್ಲೂ ಇದೇ ರೀತಿ ಇರುವುದು. ಆದರೆ **ಆಚಾರ್ಯ ಶ್ರೀಮಧ್ವರು** ರಚಿಸಿದ **ಗೀತಾ ತಾತ್ಪರ್ಯದಲ್ಲಿ ಶ್ರೀಮಜ್ಜಯತೀರ್ಥರ ಪ್ರಮೇಯ ದೀಪಿಕಾದಲ್ಲಿ ಶ್ರೀಮದ್ರಾಘವೇಂದ್ರ ಗುರುರಾಜರ ಗೀತಾವಿವೃತ್ತಿಯಲ್ಲಿ** ಭಗವದ್ಗೀತೆಯಲ್ಲಿ 701 ಶ್ಲೋಕಗಳನ್ನು ತೋರಿಸುತ್ತಾರೆ.

| ಶ್ರೀ ಶಂಕರ ಭಾಷ್ಯ ಪ್ರಕಾರ | ಶ್ರೀಮದಾಚಾರ್ಯರ ಪರಂಪರಾ ಪ್ರಕಾರ |
|---|---|
| **(1) ಶ್ರೀಕೃಷ್ಣನದು 574 ಶ್ಲೋಕಗಳು** | **(1) ಶ್ರೀಕೃಷ್ಣನದು 574 ಶ್ಲೋಕಗಳು** |
| **(2) ಅರ್ಜುನನದು 83½ ಶ್ಲೋಕಗಳು** | **(2) ಅರ್ಜುನನದು 84½ ಶ್ಲೋಕಗಳು** |
| **(3) ಸಂಜಯನದ್ದು 41½ ಶ್ಲೋಕಗಳು** | **(3) ಸಂಜಯನದ್ದು 41½ ಶ್ಲೋಕಗಳು** |
| **(2) ಧೃತರಾಷ್ಟ್ರನದು 1 ಶ್ಲೋಕ** | **(4) ಧೃತರಾಷ್ಟ್ರನದು 1 ಶ್ಲೋಕ** |
| **ಒಟ್ಟು 700 ಶ್ಲೋಕಗಳು** | **ಒಟ್ಟು701 ಶ್ಲೋಕಗಳು ಆಗುತ್ತೆ** |

**ಈಗ ಪ್ರಶ್ನೆ ಏನೆಂದರೆ ಶ್ರೀಶಂಕರರು** 700 ಶ್ಲೋಕಗಳೆಂದಿದ್ದಾರೆ. **ಮಾಧ್ವ** ಸಂಪ್ರದಾಯದಲ್ಲಿ 701 ಶ್ಲೋಕಗಳೆಂದು ಹೇಳಿದಾಗ ವಿರೋಧ ಬಂದಿತಲ್ಲಾ ಎಂದರೆ ಶ್ರೀ ಶಂಕರ ಇತ್ಯಾದಿಯರು ಗೀತೆಯ **ಹದಿಮೂರನೇ ಅಧ್ಯಾಯದಲ್ಲಿ(ಕ್ಷೇತ್ರ ಕ್ಷೇತ್ರಜ್ಞ ಯೋಗದಲ್ಲಿ)** ಪ್ರಾರಂಭ, ಅರ್ಜುನನ ಪ್ರಶ್ನೆಯನ್ನು ತೆಗೆದುಹಾಕಿದ್ದಾರೆ. ಯಾವುದಾ ಶ್ಲೋಕ?

**ಅರ್ಜುನ ಉವಾಚ**
**ಪ್ರಕೃತಿಂ ಪುರುಷಂ ಚೈವ ಕ್ಷೇತ್ರಂ ಕ್ಷೇತ್ರಜ್ಞ ಮೇವ ಚ ।**
**ಏತ ದ್ವಿದಿತುಮಿಚ್ಛಾಮಿ ಜ್ಞಾನಂ ಜ್ಞೇಯಂ ಚ ಕೇಶವ ॥** (ಗೀತಾ ೧೩.೧)

ಇದಕ್ಕೆ ಉತ್ತರವಾಗಿ ಶ್ರೀಕೃಷ್ಣನು

**''ಇದಂ ಶರೀರಂ ಕಾಂತೇಯ ಕ್ಷೇತ್ರಮಿಭ್ಯಧೀಯತೇ''** ಇತ್ಯಾದಿ ಹೊರಟಿದೆ.

ಹಾಗಾದರೆ ಶ್ರೀಶಂಕರ (ಅದ್ವೈತಪರವಾಗಿರುವ ಭಾಷ್ಯದಲ್ಲಿ) ನಿರೂಪಿಸುವಂತೆ ಹದಿಮೂರನೇ ಅಧ್ಯಾಯದ ಆರಂಭದಲ್ಲಿರುವ ಅರ್ಜುನನ ಪ್ರಶ್ನಾ ರೂಪ ಶ್ಲೋಕವನ್ನು ಏಕೆ ವಜಾಮಾಡಿರುತ್ತಾರೆ? ಮುಖ್ಯ ವಿಷಯ ಅರ್ಜುನನ ಪ್ರಶ್ನೆಯಲ್ಲಿ ಆರು ವಿಧ ಆಕಾಂಕ್ಷಾ ಇದೆ.

(1) **ಪ್ರಕೃತಿ – ಪುರುಷರು** ಯಾರು ? ಏನು ?

(2) **ಕ್ಷೇತ್ರ – ಕ್ಷೇತ್ರಜ್ಞ** ಅಂದರೇನು ? ಯಾರು ?

(3) **ಜ್ಞಾನ – ಜ್ಞೇಯ** ಅಂದರೇನು ?

ಇದರ ಬಗ್ಗೆ ತಿಳಿಸಲು ಇಷ್ಟಪಡುತ್ತೇನೆ. ಈ ರೀತಿಯಾಗಿ ಪ್ರಶ್ನೆ ಮಾಡದೇ ಇದ್ದಲ್ಲಿ ಶ್ರೀಕೃಷ್ಣನು ತಾನಾಗಿ ಯಾವ ಆಕಾಂಕ್ಷೆ ಇಲ್ಲದೆ **''ಇದಂ ಶರೀರಂ ಕಾಂತೇಯ''**ಎಂದು ಹೇಳಿದ್ದರೆ ಸಂಗತಿ ಕೂಡುತ್ತಿದ್ದಿಲ್ಲ. ಏಕೆ ಅಂದರೆ ಶ್ರೀ ಕೃಷ್ಣನನ್ನು ನಾವು ಹೀಗೆ ಕೇಳುತ್ತೇವೆ. ಸ್ವಾಮಿ, ಕ್ಷೇತ್ರ ಕ್ಷೇತ್ರಜ್ಞ ವಿಷಯವಾಗಿ ಹೇಳು ತಿಳಿಸು ಅಂತ ಯಾರು ನಿನಗೆ ಕೇಳಿದರು? ಇದು ಆಯುಕ್ತವು. ಅಸಂಗತ ಅಂತ ಆಕ್ಷೇಪಿಸಿದಾಗ ಶ್ರೀಕೃಷ್ಣನು ಉತ್ತರಿಸುತ್ತಾನೆ. ಕೇಳಿರಿ. ನಾನು ಏನು ಹೇಳಿದರೂ ಸಂಗತಿ ಕೊಡಿಸಿಯೇ ಹೇಳಿರುತ್ತೇನೆ. ಉದಾಹರಣೆಗಾಗಿ ಹಿಂದೆ **ಸಾಂಖ್ಯ ಯೋಗದಲ್ಲಿ ಅರ್ಜುನ ಉವಾಚ.**

(1) **''ಕಾರ್ಪಣ್ಯದೋಷೋಪಹತ ಸ್ವಭಾವಃ**
**ಯತ್‌ಶ್ರೇಯಃ ಸ್ಯಾನ್ನಿಶ್ಚಿತಂ ಬ್ರೂಹಿ ತನ್ಮೇ**
**ಶಿಷ್ಯಸ್ತೆಹಂ ಶಾಧಿ ಮಾಂ ತ್ವಾಂ ಪ್ರಪನ್ನಂ''**

ಎಂದು ಅರ್ಜುನನು ತಾನು ಭಗವಂತನಿಗೆ ಶಿಷ್ಯನಾಗಿ ಯಾವುದು ಶ್ರೇಯಸ್ಸು ಅದನ್ನು ಶಾಧಿ. ಅಂದರೆ ಆಜ್ಞಾ, ಶಿಕ್ಷಿಸು ಎಂದು ಕೇಳಿದಾಗ ನಂತರವೇ **''ಅಶೋಚ್ಯಾನನ್ವಶೊಚಸ್ತ್ವಂ''** ಎಂದೇ ಉತ್ತರ ರೂಪವಾಗಿ ಕೇಳಿದ್ದೇನೆ ಹೊರತು ನಾನಾಗೇ ನಾನು ಹೇಳಿಯೇ ಇಲ್ಲ.

(2) ಇದೇ ಸಾಂಖ್ಯಯೋಗಾಧ್ಯಾಯದಲ್ಲಿ 54ನೇ ಶ್ಲೋಕದಲ್ಲಿ ಅರ್ಜುನನ ಪ್ರಶ್ನೆ
**''ಸ್ಥಿತಿ ಪ್ರಜ್ಞಾಸ್ಯ ಕಾ ಭಾಷಾ ಸಮಾಧಿಸ್ಥಸ್ಯ ಕೇಶವ ॥**
**ಸ್ಥಿತಧೀಃ ಕಂ ಪ್ರಭಾಷೇತ ಕಿಮಾಸೀತ ವ್ರಜೇತಕಿಂ ॥''**



ಸ್ಥಿತಿಪ್ರಜ್ಞ ಸಮಾಧಿ ಇತ್ಯಾದಿಗಳನ್ನು ವಿವರಿಸು ಅಂತ ಕೇಳಿದ ನಂತರವೇ ಉತ್ತರಿಸುತ್ತೇನೆ. **ಪ್ರಜಾಹಾತಿ ಯದಾ ಕಾಮಾನ್** ಇತ್ಯಾದಿಯಾಗಿ

(3) **ಕರ್ಮ ಸನ್ಯಾಸ ಯೋಗ ಅಧ್ಯಾಯ 36**ನೇ ಶ್ಲೋಕ ಅರ್ಜುನ ಪ್ರಶ್ನೆ **''ಅಥಕೇನ ಪ್ರಯುಕ್ತೋಽಯಂ ಪಾಪಂ ಚರತಿ ಪೂರುಷಃ''** ಎಂದು ಕೇಳಿದ ನಂತರವೇ ನನ್ನ ಉತ್ತರ ಮಾತುಗಳಿವೆ.

(4) ನಾಲ್ಕನೇ ಅಧ್ಯಾಯ ಜ್ಞಾನಯೋಗ (4)ರಲ್ಲಿ ಅರ್ಜುನ ಕೇಳುತ್ತಾನೆ **''ಅಪರಂ ಭವತೋ ಜನ್ಮ ಪರಂ ಜನ್ಮ ವಿವಸ್ವತಃ''** ಶ್ರೀ ಕೃಷ್ಣ ಹೇಳಿದ್ದ. ಈ ಸಾಂಖ್ಯ (ಕರ್ಮಯೋಗ)ವನ್ನು ಬಹಳ ಹಿಂದೆ **ವಿವಸ್ವಾನ್** ಎಂಬ ಸೂರ್ಯನಿಗೆ ಉಪದೇಶ ಮಾಡಿದೆ ಎಂದು. ಕಾಲಕ್ರಮೇಣ ತಿರೋಹಿತವಾಯಿತು. ಈಗ ನಿನಗಾಗಿ ಪುನಃ ಅದನ್ನೇ ಉಪದೇಶ ಮಾಡುತ್ತಿದ್ದೇನೆ ಅಂದಾಗ. ಅಲ್ಲ ಕೃಷ್ಣ ನೀನು ಈಗ ವಸುದೇವನ ಮಗನಾಗಿ ಹುಟ್ಟಿರುವೆ (28ನೇ ದ್ವಾಪರ ಮಧ್ಯ) **ವಿವಸ್ವಾನ್** ಎಂಬ ಸೂರ್ಯ. ಎಷ್ಟೋ ಕಲ್ಪ ಮನ್ವಂತರಗಳ ಹಿಂದೆ ಇದ್ದ ಅಂದ ಮೇಲೆ ಆ ಸೂರ್ಯನಿಗೆ ನೀನು ಯಾವಾಗ ಹೇಗೆ ಹೇಳಿದೆ. ನಂಬಲು ಅಸಾಧ್ಯ. ಈ ರೀತಿ ಪ್ರಶ್ನೆಗೆ ಉತ್ತರವಾಗಿ ನಾನು ಅನಾದಿನಿತ್ಯನು ಜನನ ಮರಣಾದಿಗಳ ರಹಿತನು ಆದರೆ ಈಗ ಕೃಷ್ಣನೆಂದು ನನ್ನ ಅವತಾರವೇ ವಿನಃ ಜನ್ಮರಹಿತನು ಎಂದು ತಿಳಿಯಬೇಕು. ಅರ್ಜುನ ನೀನು ಅನೇಕ ಸಲ ಹುಟ್ಟಿರುವೆ. ಅದಕ್ಕೆ ಜನ್ಮವೆನ್ನುತ್ತಾರೆ. ನಾನೂ ಸಹ ಅನೇಕ ಸಲ ಹುಟ್ಟಿದೆ. ಆದರೆ, ನನ್ನ ಹುಟ್ಟನ್ನು ಅವತಾರ ಎನ್ನುತ್ತಾರೆ. ಆದ್ದರಿಂದ ನಾನು ಸ್ವರೂಪದಿಂದಲೂ ಅನಾದಿನಿತ್ಯನು.

ಹೀಗೆ ಏನೇ **ತತ್ವ** ತಿಳಿಸಲು ಪ್ರಶ್ನೆ **ಮಾಡಿದ ಮೇಲೆಯೇ ಉತ್ತರಿಸುತ್ತೇನೆ.** ಪ್ರಸ್ತುತ ಅರ್ಜುನ ಕ್ಷೇತ್ರ – ಕ್ಷೇತ್ರಜ್ಞ ವಿಷಯವಾಗಿ ಕೇಳಿದ ಮೇಲೆ ನನ್ನ ಉತ್ತರ **''ಇದಂ ಶರೀರಂ''** ಎಂದು ಸಂಗತಿ ಇದೆ. ಇಲ್ಲದೇ ಹೋದರೆ ಶ್ರೀಕೃಷ್ಣನ ವಾಕ್ಯ ವೃಥಾಪ್ರಲಾಪ ಆಗುತ್ತೆ.

**ವಿಶೇಷ ಅಂಶ** – ಹಿಂದಿನ 2ನೇ ಅಧ್ಯಾಯ 11ನೇ ಶ್ಲೋಕದಿಂದ 6ನೇ ಅಧ್ಯಾಯದವರೆಗೆ ನಿರೂಪಿಸಿದ್ದನ್ನು ಮತ್ತೂ 7ನೇ ಅಧ್ಯಾಯದಿಂದ 12ನೇ ಅಧ್ಯಾಯದವರೆಗಿನ ವಿಷಯಗಳನ್ನು ಈಗಿನ 13ನೇ ಅಧ್ಯಾಯದಲ್ಲಿ ಎಲ್ಲಾ ಪ್ರಮೇಯಗಳನ್ನು ಸಂಗ್ರಹ ರೂಪವಾಗಿ ತಿಳಿಸಲು ಹೊರಟಿದೆ.

**ಪೂರ್ವೋಕ್ತ ಜ್ಞಾನ ಜ್ಞೇಯ ಕ್ಷೇತ್ರ ಪುರುಷಾನ್ ಪಿಂಡೀಕೃತ್ಯ ವಿವಿಚ್ಯ ದರ್ಶಯತಿ ಅನೇನ ಅಧ್ಯಾಯೇನ**
ಆಚಾರ್ಯರ ಭಾಷ್ಯ
ಶ್ರೀ ಆಚಾರ್ಯರ ಗೀತಾತ್ಪರ್ಯ **''ಸರ್ವಾರ್ಥ ಸಂಗ್ರಹೋಯಮ್''**

## ವಿಷಯಕ್ಕೆ ಬರೋಣ

ಹೀಗಿದ್ದರೂ ಶ್ರೀ ಶಂಕರಭಾಷ್ಯದಲ್ಲಿ 700 ಶ್ಲೋಕಗಳೇ ಇರುವುದೆಂದು ಹಿಂದೆ ತಿಳಿಸಲಾಯಿತು. ಹದಿಮೂರನೇ ಅಧ್ಯಾಯ ಶ್ಲೋಕವಾದ ಅರ್ಜುನನ ಪ್ರಶ್ನಾ ಶ್ಲೋಕವು ಅವರ ಭಾಷ್ಯದಲ್ಲಿ ಲುಪ್ತವಾಗಿದೆ ಅಂತಲೂ ಹೇಳಲಾಯಿತು.

**ಅವರು ಏಕೆ ತೆಗೆದರು.** ಎರಡು ಸಂಶಯ ಬರುತ್ತೆ. (1) **ಶ್ರೀ ಶಂಕರರಿಗೆ** ಹದಿಮೂರನೇ ಅಧ್ಯಾಯ ಪ್ರಥಮ ಶ್ಲೋಕ ತಿಳಿದಿದ್ದಿಲ್ಲವೇ? (2) ತಿಳಿದಿದ್ದರೂ ಆ **ಶ್ಲೋಕವು** ತಮ್ಮ **ಅದ್ವೈತ ಸಿದ್ಧಾಂತಕ್ಕೆ ವಿರೋಧವಾಗಿದೆ** ಎಂದು ಹಾಗೆ ಮಾಡಿದ್ದಾರೆಯೋ? **ಎರಡನೇ ವಿಕಲ್ಪವು ಸರೀ** ಅಂತ ಕಾಣುತ್ತೆ. ಹಾಗಾದರೆ ಆ ಶ್ಲೋಕದಿಂದ (ಅಭಿಪ್ರಾಯವು) ಹೇಗೆ ವಿರುದ್ಧ ಎಂಬುದನ್ನು ಸೂಕ್ಷ್ಮವಾಗಿ ವಿಚಾರ ಮಾಡುವ **ಅದ್ವೈತ ಸಿದ್ಧಾಂತ** ಏನು. **ಶ್ರೀ ಶಂಕರಾಚಾರ್ಯರೇ ತಿಳಿಸುತ್ತಾರೆ.**

**"ಸಂಕ್ಷೇಪಣ ಪ್ರವಕ್ಷ್ಯಾಮಿ ಕಿಂ ಅನ್ಯೈಃ ಗ್ರಂಥಕೋಟಿಭಿಃ ।**
**ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋಬ್ರಹ್ಮೈವನಾಪರಾ ॥"**

ಕೋಟಿಗಟ್ಟಲೆ ಗ್ರಂಥಾವಲೋಕನದಿಂದ ಏನು ಪ್ರಯೋಜನ. ಅರ್ಧ ಶ್ಲೋಕದಿಂದ ತಿಳಿಸುತ್ತೇನೆ. **ಬ್ರಹ್ಮ ಒಬ್ಬನೇ ಸತ್ಯ. ಈ ಜಗತ್ತಾದರೂ ಮಿಥ್ಯ. ಇನ್ನು ಜೀವನು(ರು) ಬ್ರಹ್ಮನೇ(ರೆ) ಆಗಿರುತ್ತಾರೆ.** (ಜೀವನೇ ಬ್ರಹ್ಮನು ಬೇರೆ ಇರುವುದಿಲ್ಲ.) ಇದು ಅವರ ಮತ. (**ಜೀವಬ್ರಹ್ಮೈಕ್ಯವಿರುವುದು**) ಇರಲಿ. ಆದರೇ ಈ ಮತಕ್ಕೂ ಗೀತೆಯ 13ನೇ ಅಧ್ಯಾಯ ಶ್ಲೋಕಕ್ಕೂ ಏನು ಸಂಬಂಧ ಅಂದರೆ ಸ್ವಲ್ಪ ವಿಚಾರ ಮಾಡಿದರೆ ನಿಜಸಂಗತಿ ತಿಳಿಯುತ್ತದೆ. ಪ್ರಶ್ನೆ ಏನು ಪ್ರಕೃತಿ ಪುರುಷ ಕ್ಷೇತ್ರ–ಕ್ಷೇತ್ರಜ್ಞ ಜ್ಞಾನ ಜ್ಞೇಯ ವಿಷಯವಾಗಿ ಪ್ರಶ್ನೆ. (1) ಪ್ರಕೃತಿ ಎಂದರೆ ಜಗತ್ತು ಹಿಂದೆ 2ನೇ ಅಧ್ಯಾಯವಾದ ಸಾಂಖ್ಯಯೋಗ 16ನೇ ಶ್ಲೋಕದಲ್ಲಿ ಪ್ರಕೃತಿಯ ಬಗ್ಗೆ ತಿಳಿಸಿರುತ್ತಾನೆ.

ಶ್ಲೋ॥ **ನಾಸತೊವಿದ್ಯತೆಭಾವೋ ನಾ ಭಾವೋವಿದ್ಯತೇ ಸತಃ**

ಅಂದರೆ **ಅಸತಃ** ಕಾರಣ್ಯಸ್ಯ **ಪ್ರಕೃತೇಃ ಅಭಾವ ಪ್ರಾಗ್‌ಭಾವ ಪ್ರಧ್ವಂಸಾ ಭಾವ ನವಿದ್ಯತೆ. ವಿವರಣೆ** ಕಾರಣವಾದ ಜಗತ್ತು ನಿರ್ಮಾಣಕ್ಕೆ **ಕಾರ್ಯವಾದ ಚಿತ್ ಅಚೇತನ ಪ್ರಕೃತಿಗಳು** ನಿತ್ಯ. ಹಿಂದೆ ಇದ್ದಿಲ್ಲವೆಂದಲ್ಲ ಅಥವಾ ಧ್ವಂಸ ಮಾಡಲೂ ಬರುವುದಿಲ್ಲ. ಅಚೇತನ ಪ್ರಕೃತಿಗಳೆನಿಸಿದ **ಭೂಮಿ ನೀರು ಅಗ್ನಿ** ಇವುಗಳು ಸದಾನಿತ್ಯ ಅಂದಾಗ ಜಗತ್ತು ಹಿಂದೆಯೂ ಇದ್ದಿತು. ಈಗಂತೂ ಇದ್ದೇ ಇದೆ. ಮುಂದೆಯೂ ಇದ್ದೇ ಇರುತ್ತದೆ. ತಾತ್ಪರ್ಯವೇನೆಂದರೆ: ಅದ್ವೈತಿಗಳ ಪ್ರಕಾರ **ಜಗತ್ತು ಮಿಥ್ಯಾ.** ಅದು ಸುಳು ಇಲ್ಲವೇ ಇಲ್ಲ ಎಂಬುದನ್ನು ಇಲ್ಲಿ ಖಂಡಿಸಿ ಜಗತ್ತು ಸತ್ಯವೇ ಪರಮ ಸತ್ಯವು ಎಂದು ಹೇಳಿದಂತಾಯಿತು. ಇದು ಅವರಿಗೆ ಅನುಕೂಲವಾಗಿಲ್ಲ. ಇನ್ನು ಪುರುಷಂ ಎಂದಾಗ ಈ ಜಡ ಪ್ರಕೃತಿಯಿಂದ ಪಂಚಭೂತಗಳಾದ



**ಪೃಥಿವೀ, ಅಬ್, ತೇಜಸ್ಸು, ಅಗ್ನಿ, ಆಕಾಶಾದಿಗಳಿಂದ** ನಿರ್ಮಿಸಿದ **ಜೀವರ ದೇಹಾದಿಗಳು.** ಇಲ್ಲಿ ಪುರುಷ ಎಂದಾಗ ದೇಹ ಧರಿಸಿದ **ಜೀವನೂ ನಿತ್ಯನು.** ಈ ವಿಷಯವನ್ನು ಶ್ರೀಕೃಷ್ಣನು ಪದೇಪದೇ ಹೇಳುತ್ತಾ ಬಂದಿದ್ದನೆ. **ನತ್ವೇವಾಹಂ ಜಾತುನಾಸಂ ಎಂದು ಅಲ್ಲಿಗೆ ಪ್ರಕೃತಿಯ ವಿಕಾರ ಜಗತ್ತು. ಪ್ರಕೃತಿಯಿಂದ ನಿರ್ಮಾಣವಾದ ದೇಹಧಾರಿ ಜೀವನೂ ನಿತ್ಯವೆಂದಾಯಿತು.** ಜಗತ್ತು ನಿತ್ಯ ಜೀವನೂ ನಿತ್ಯ, ಇನ್ನು ಪರಬ್ರಹ್ಮನೂ ನಿತ್ಯವೆಂದಾಗ ಮಿಥ್ಯಾ ಅಂತ ಹೇಗೆ ಸಾಧಿಸಲು ಆಗುತ್ತೆ? ಇನ್ನು ಕ್ಷೇತ್ರ ಅಂದರೆ 24 ತತ್ವಾಭಿಮಾನಿ ದೇವತೆಗಳು ಮುಖ್ಯ ಪ್ರಾಣನು. ಶ್ರೀಹರಿಯೂ ಶರೀರದಲ್ಲಿ ಇದ್ದುಕೊಂಡು ವ್ಯಾಪಾರ ಮಾಡಿಸುತ್ತಾರೆ. ಆದ್ದರಿಂದ ಈ ಶರೀರವು ಕ್ಷೇತ್ರವೆನಿಸುವುದು. ಪ್ರತಿ ದೇಹಾದಿಗಳಲ್ಲಿ ಶ್ರೀಹರಿ ಇದ್ದುಕೊಂಡು, ಅಂದರೆ ಸಮಸ್ತ ಸೃಷ್ಟಿಗತ ಶರೀರದ ಬಗ್ಗೆ ಕೂಲಂಕುಶವಾಗಿ ಪೂರ್ಣ ತಿಳಿದಿರುತ್ತಾನೆ. ಆದ್ದರಿಂದ ಅವನು **ಕ್ಷೇತ್ರಜ್ಞ ಕ್ಷೇತ್ರಾಣಿ ಜಾನಾತೀತಿ** ಎಂದು. ಅಸ್ವತಂತ್ರನಾದ ಜೀವ ದೇಹದಲ್ಲಿರುವ ಅಭಿಮಾನಿ ದೇವತೆಗಳಿಂದ ನಿಯಮಿತನಾಗಿರುತ್ತಾನೆ. ಹಾಗಾಗಿ ಅವನ ಶರೀರವು **ಕ್ಷೇತ್ರ**ವಾಯಿತು.

ಇದೆಲ್ಲವನ್ನೂ ತಿಳಿಯುವುದು **ಜ್ಞಾನ ಜ್ಞೇಯಂ** ಎಂದರೆ ಜೀವನೇ ಆಗಿರುತ್ತಾನೆ.

ಇಷ್ಟು ವಿಷಯ ತುಂಬಿದೆ. **ಹೇಳುವವನು, ಹೇಳಿಸಿಕೊಳ್ಳುವವನು** ಇಬ್ಬರೂ ಅವಶ್ಯ. ಅದ್ವೈತ ಮತ ಪ್ರಕಾರ ಎಲ್ಲರೂ ಬ್ರಹ್ಮರಾದರೆ ಯಾರು ಹೇಳುವವರು, ಕೇಳುವವರ್ಯಾರು. ಎಲ್ಲರೂ ಸಬ್‌ಲುಂಡಾ ಆಯಿತು.

ಆದ್ದರಿಂದ ಈ ಶ್ಲೋಕವು ಅವರಿಗೆ ಪ್ರತಿಕೂಲವಾಗಿದೆ ಅಂತಲೇ ಕೈಬಿಟ್ಟಿರಬೇಕು. ಅಲ್ಲವೇ ? ತುಂಬಾ ದೀರ್ಘ ವಿವರಣೆ ಆಯಿತು.

**ಉಪಸಂಹಾರ** – ಆದ್ದರಿಂದ ಶ್ರೀ ಶಂಕರ ಭಾಷ್ಯದಲ್ಲಿ **700 ಶ್ಲೋಕಗಳನ್ನು** ಕಾಣುತ್ತೇವೆ. ಅದೇ ರೀತಿ ಅವರ ಅನುಯಾಯಿಗಳು ಅದನ್ನು ಹೇಳುತ್ತಾರೆ. ಇನ್ನೊಂದು ಮುಖ್ಯ ವಿಷಯ ಹೊರಬಂದಿದೆ. ಏನದು ? ಭಗವದ್ಗೀತೆಯಲ್ಲಿ ಸತ್ಯವಾಗಿ ಎಷ್ಟು ಶ್ಲೋಕಗಳಿವೆ ? **ಮಹಾಭಾರತ** ಭೀಷ್ಮಪರ್ವ ತ್ರಿಚಾತ್ವಾರಿಂಶೋಧ್ಯಾಯ, **ಗೀತಾಮಾಹಾತ್ಮ್ಯಂ** ಶ್ಲೋಕ **4-5 ರಲ್ಲಿ ಹೀಗಿದೆ.**

## ಗೀತಾಮಾಹಾತ್ಮ್ಯಂ ಶ್ಲೋಕ 4-5

**ಷಟ್‌ಶತಾನಿಸವಿಂಶಾನಿ ಶ್ಲೋಕಾನಾಂ ಪ್ರಾಹ ಕೇಶವಃ ।**
**ಅರ್ಜುನಃ ಸಪ್ತಪಂಚಾಶತಾನಿ ಸಪಷಷ್ಟಿಂ ತು ಸಂಜಯಃ ॥**
**ಧೃತರಾಷ್ಟ್ರಃ ಶ್ಲೋಕಮೇಕಂ ಗೀತಾಯಾ ಮಾನಮುಖ್ಯತೆ ॥**

ಅರ್ಥಾತ್

ಶ್ರೀಕೃಷ್ಣನದು 620 ಶ್ಲೋಕಗಳು
ಅರ್ಜುನನದು 57 ಶ್ಲೋಕಗಳು

ಸಂಜಯನದು 67 ಶ್ಲೋಕಗಳು
ಧೃತರಾಷ್ಟ್ರನದು 1 ಶ್ಲೋಕ

ಒಟ್ಟು ಸೇರಿಸಿದರೆ **745 ಶ್ಲೋಕಗಳಾಗುತ್ತದೆ.** ಆದರೆ ಎಲ್ಲಾ ಮತಾಚಾರ್ಯರು **700** ಅಥವಾ **701** ಶ್ಲೋಕಗಳೆಂದೆ, ಅವುಗಳಿಗೆ ಭಾಷ್ಯ ಬರೆದಿರುತ್ತಾರೆ.

ಹಾಗಾದರೆ ಭಾರತ ಉಕ್ತಿ ಪ್ರಕಾರ 44 ಶ್ಲೋಕಗಳು ಯಾವುದು? ಎಲ್ಲಿ ಹೋದವು? ಮತಾಚಾರ್ಯರು ಏಕೆ ಗ್ರಹಿಸಿಲ್ಲ? ತಿಳಿಯಬೇಕಾಗಿದೆ.

### ಶೋಧನೆ ಆಗಬೇಕು

(1) ಶಂಕರಾಚಾರ್ಯರ ಭಾಷ್ಯವೇ ಈಗ ಲಭಿಸಿರುವ ಅತಿ ಪ್ರಾಚೀನ

(2) ರಾಮಾನುಜರ ಭಾಷ್ಯ ಟೀಕಾಕಾರರು ಶ್ರೀವೇದಾಂತದೇಶಿಕಾಚಾರ್ಯರು.

(3) ಶ್ರೀ ಮಧ್ವಾಚಾರ್ಯರ ಭಾಷ್ಯ ಶ್ರೀ ಜಯತೀರ್ಥರ ಟೀಕಾ ಮತ್ತು ಶ್ರೀ ರಾಘವೇಂದ್ರ ಗುರುರಾಜರ ಗೀತಾವಿವೃತ್ತಿ.

ಮುಖ್ಯ ವಿಷಯ ಮೊಗಲ್ ರಾಜರ ಕಾಲದಲ್ಲಿ ಗೀತಾ ಪರ್ಷಿಯನ್ ಭಾಷೆಯಲ್ಲಿ ಅನುವಾದಿಸಲ್ಪಟ್ಟಿತು. ಇದರ ಪ್ರಕಾರ **ಪ್ರಾಚೀನ ಭಗವದ್ಗೀತೆಯಲ್ಲಿ 745** ಶ್ಲೋಕಗಳಿದ್ದಂತೆ ಕಂಡು ಬರುವುದು. **ಗೊಂಡಾಲ್** ಎಂಬಲ್ಲಿ ಪ್ರಾಚೀನ ಗೀತಾ ಬಗ್ಗೆ ಒಂದು ಅಪೂರ್ವ ದಾಖಲೆ **ನಂ. 6763-D**ಯಲ್ಲಿಯೂ ಇರುವುದು. **ಭ್ಯೂಲರ್** ಎಂಬ ಇಂಗ್ಲೀಷ್ ಪಂಡಿತನು ತನ್ನ ಶೋಧನೆಯಲ್ಲಿಯೂ ಗೀತೆಯಲ್ಲಿ ಈಗ ಲಭ್ಯವಿರುವಂತೆ 700 ಶ್ಲೋಕಗಳಿಗೂ ಹೆಚ್ಚು ಇರಬೇಕು ಅಂತ ವ್ಯಕ್ತಪಡಿಸಿರುತ್ತಾನೆ.

### ಪ್ರಕ್ಷಿಪ್ತ ಶ್ಲೋಕಗಳು

ಇಂತಹ ಮಹನೀಯರು ತಾವು ಬರೆದ ಭಾಷ್ಯಗಳನ್ನು ಶ್ರೇಷ್ಠ ಪ್ರಮಾಣವೆಂದು ಜಗತ್ತಿನಲ್ಲಿ ಎಲ್ಲರೂ ಓದುತ್ತಾರೆ. ಅಂದ ಮೇಲೆ ಭಗವದ್ಗೀತೆಯಲ್ಲಿ 700 ಅಥವಾ 701 ಶ್ಲೋಕಗಳಿಷ್ಟನ್ನು ಹಿಡಿದಿರುತ್ತಾರೆ. 44 ಶ್ಲೋಕಗಳು ಪ್ರಾಯಶಃ ಪ್ರಕ್ಷಿಪ್ತವಾಗಿರಬೇಕು. ಅಂದರೆ ಮಹಾಭಾರತದಲ್ಲಿ ಸಾಕಷ್ಟು Original ಗಿಂತ ಪ್ರಕ್ಷಿಪ್ತಗಳಾಗಿರಲಿಕ್ಕಿರಬೇಕು.

ಆದರೆ ಒಂದು ಸಂಶಯ ಉಳಿದುಕೊಳ್ಳುತ್ತೆ. ವೇದವ್ಯಾಸರು ಬರೆದ ಮಹಾಭಾರತದ ಭೀಷ್ಮಪರ್ವದಲ್ಲಿ. ಗೀತೆಯ ಶ್ಲೋಕಗಳ ಬಗ್ಗೆ ಎರಡು ಕಡೆ ಪರಸ್ಪರ ವಿರುದ್ಧ Numbers ಇರಲು ಏನು ಕಾರಣ. ಹಾಗೇನಾದರೂ ಇದ್ದಲ್ಲಿ ಅದರ ವಿವರಣೆ ಸಮಾಧಾನ ಏನು? ನನಗೆ ತಿಳಿದ ಮಟ್ಟಿಗೆ ಎರಡು ಅಂಶ ಗೋಚರವಾಗುವುದು. ಭಗವದ್ಗೀತೆಯ ಹದಿನೆಂಟು ಅಧ್ಯಾಯಗಳಲ್ಲಿ ಪ್ರತಿ ಒಂದು ಅಧ್ಯಾಯ ಸಮಾಪ್ತಿ ಆಗುವಾಗ ಹೀಗೆ ತಿಳಿಸುತ್ತೆ.

**ಓಂ ತತ್ಸದಿತಿ ಶ್ರೀಮದ್‌ಭಗವದ್ಗೀತಾಸು**
**ಉಪನಿಷದ್ಸು ಬ್ರಹ್ಮವಿದ್ಯಾಯಾಂ ಇತಿ**



ಇಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದ್ದು **ಉಪನಿಷತ್ತು** ಎಂಬುದನ್ನು. ಅಂದರೆ ಭಗವದ್ಗೀತೆಯು ಉಪನಿಷತ್ತಿನಲ್ಲಿರುವ ಬ್ರಹ್ಮವಿದ್ಯೆಯನ್ನು ತಿಳಿಸುತ್ತದೆ ಎಂದಾಯಿತು. ಆಗ ಗೀತೆಯ ಶ್ಲೋಕಗಳು ಉಪನಿಷತ್ತಿನ ಅರ್ಥ ಪ್ರಮೇಯಗಳನ್ನು ತಿಳಿಸುತ್ತದೆ ಅಂದಹಾಗಾಯಿತು.

ಉಪನಿಷತ್ತು ಎಂಬಲ್ಲಿ ಸಪ್ತಮೀ ವಿಭಕ್ತಿ ಪ್ರಯೋಗವಿದೆ. ಉಪನಿಷತ್ತುಗಳಲ್ಲಿ ಎಂದು. ಹೀಗೆ ಕೆಲಮುಖ್ಯ ಉಪನಿಷತ್ತು ಮಂತ್ರಗಳನ್ನು ಶ್ಲೋಕ ರೂಪದಲ್ಲಿ ಇರಬೇಕು (ಇವು ಸೇರಿಸಿರಬೇಕು)

ದ್ವಿತೀಯಾಧ್ಯಾಯ (19) ಆದಾವಂತೇ ಚ ಯನ್ನಾಸ್ತಿ ವರ್ತಮಾನೇಪಿ ತತ್ತಥಾ ವಿತಥೈ ಸದೃಶಾಃ ಸಂತೋಅವಿತಥಾ ಇವಲಕ್ಷಿತಾಃ॥

ತೃತೀಯೋಧ್ಯಾಯದಲ್ಲಿ 5 - ಶ್ಲೋಕಗಳು

ಇದಕ್ಕೆ ಸಂಗತಿಯಾಗಿ ಗೀತಾ ಪಠಪ್ರಾರಂಭದಲ್ಲಿ ಹೀಗೆ ಇರುವುದು.

**। ಸರ್ವೋಪನಿಷದೋಗಾವೋ ದೋಗ್ಧಾಗೋಪಾಲನಂದನಃ ।**

ಇದರ ಅರ್ಥ ಸ್ಪಷ್ಟವಾಗಿದೆ. ಉಪನಿಷತ್ತುಗಳನ್ನು ಹಸುವನ್ನಾಗಿ ಮಾಡಿ (ಉಪನಿಷತ್ತುಗಳೆಂಬ ಆಕಳ ಹಾಲನ್ನು (ಸಾರವನ್ನು) ಶ್ರೀಕೃಷ್ಣನು ಕರೆದನು.

ಉಪನಿಷತ್ತುಗಳನ್ನು ಓದಲು ಅನರ್ಹರನ್ನು ಉದ್ದೇಶಮಾಡಿ ಅವುಗಳ ಸಾರವನ್ನು, ತಿರುಳನ್ನು, ಪ್ರಮೇಯಗಳನ್ನು ಭಗವದ್ಗೀತೆಯಲ್ಲಿ ಅಡಕವಾಗುವಂತೆ ಭಗವಂತನು ಕರುಣಿಸಿದನು ಎಂದು ಅಭಿಪ್ರಾಯವೇ?

ಎರಡನೆಯದಾಗಿ ಶಾಸ್ತ್ರಕಾರರು ತಿಳಿಸಿದಂತೆ ವೇದ ಅನಧಿಕಾರರಾದವರ ಉದ್ಧಾರಕ್ಕಾಗಿ ವೇದಗಳ ಸಾರಭೂತವಾದ ಉಪನಿಷತ್ತುಗಳನ್ನು ನೇರವಾಗಿ ಅದೇ ಮಂತ್ರಗಳನ್ನು ಬರಿಯದೇ ತತ್ವಗಳನ್ನು ಭಗವದ್ಗೀತೆಯಲ್ಲಿ ಶ್ಲೋಕಗಳ ಮೂಲಕ ತಿಳಿಸಿರುತ್ತಾರೆ – ವೇದವ್ಯಾಸರು. ಹೀಗಾಗಿ 44 ಶ್ಲೋಕಗಳು ಕಾಲಗತಿಯಿಂದ ಪ್ರಕ್ಷಿಪ್ತವಾಗಿರಲಿಕ್ಕೇಬೇಕು.

(44 ಹೆಚ್ಚಿನ ಶ್ಲೋಕಗಳು ಯಾವುವು ಎನ್ನುವುದು ನನ್ನ ಸಂಗ್ರಹದಲ್ಲಿ ಇರುವುದು) ಇಲ್ಲಿಗೆ ಉಪಸಂಹಾರ ಮಾಡೋಣ.

ಸಂಗ್ರಹ / ಅನುವಾದ
**ಪ್ರೊ॥ ಬದರೀನಾಥಾಚಾರ್ಯ ಘೂಳಿ** ಎಂ.ಎ.

**ಭಗವದ್ಗೀತೆಯಲ್ಲಿ ಯುದ್ಧ ರಣರಂಗ ವ್ಯೂಹ ರಚನೆಯು ವರ್ಣಿತವಾಗಿದೆ.**

ಎರಡೂ ಪಕ್ಷಗಳಲ್ಲಿ ಸೇನೆ ಸೇನಾನಾಯಕರನ್ನು ಕೇಳುತ್ತೇವೆ. ಸೇನಾನಾಯಕರು ನಾಲ್ಕು ವಿಧ (*a*) **ಮುಖ್ಯ (ಪ್ರಧಾನ) ಸೇನಾಧಿಪತಿ** (*b*) **ಮಹಾರಥಿಕ** (*c*) **ರಥಿಕ** (*d*) **ಅರ್ಧರಥಿಕನೆಂದು**

**ಪಾಂಡವರಿಗೆ** ದೃಷ್ಟದ್ಯುಮ್ನ ಸೇನಾಧಿಪತಿ (ಏಳು ಅಕ್ಷೌಹಿಣಿ ಸೇನಾಕ್ಕೆ)

**ಕೌರವರಿಗೆ** ಭೀಷ್ಮಾಚಾರ್ಯರು (ಹತ್ತು ದಿನ) ಸೇನಾಧಿಪತಿಗಳಾಗಿದ್ದರು.
ದ್ರೋಣಾಚಾರ್ಯರು (ನಾಲ್ಕು ದಿನ) ಸೇನಾಧಿಪತಿಗಳಾಗಿದ್ದರು.
ಕರ್ಣ (ಎರಡು ದಿನ) ಸೇನಾಧಿಪತಿಗಳಾಗಿದ್ದರು.
ಶಲ್ಯ (ಒಂದುವರೆ ದಿನ) ಸೇನಾಧಿಪತಿಗಳಾಗಿದ್ದರು.
ದುರ್ಯೋಧನ (ಅರ್ದ ದಿನ) ಸೇನಾಧಿಪತಿಯಾಗಿದ್ದ.

ಮಹಾರಥಿಕನೆಂದರೆ (ಉದ್ಯೋಗಪರ್ವದಲ್ಲಿ) ವಿವರಣೆ ಇದೆ.

**''ಏಕೋದಶ ಸಹಸ್ರಾಣಾಂ ಯೋಧ ಯುದ್ಯಃ ಯಸ್ತುಧನ್ವಿನಾಂ।**
**ಶಸ್ತ್ರಶಾಸ್ತ್ರಪ್ರವೀಣಶ್ಚ ಮಹಾರಥ ಇತ್ಯುಚ್ಯತೆ''**

ಏಕಾಕಿಯಾಗಿ ಹತ್ತು ಸಹಸ್ರ ಯೋಧರು, ಧನುರ್ಧಾರಿಗಳನ್ನು ಯುದ್ಧದಲ್ಲಿ ತನ್ನ ಶಸ್ತ್ರ ಪ್ರಾವೀಣ್ಯತೆಯಿಂದ ಎದುರಿಸಿ ಯುದ್ಧ ಮಾಡುವವನನ್ನು **ಮಹಾರಥನೆಂದು** ಕರೆಯಬೇಕು.

ಭೀಷ್ಮಾಚಾರ್ಯರು ಸೈನಿಕರನ್ನು ವಿಂಗಡಿಸುತ್ತಾ **ಕರ್ಣನನ್ನು ಅರ್ಧರಥಿಕನೆಂದು** ಹೇಳಿದರು. ಇದರಿಂದ ಕರ್ಣನಿಗೆ ಕೋಪ ಬಂತು. ಎಲ್ಲಿಯವರೆಗೂ ಭೀಷ್ಮರು ಸೇನಾಧಿಪತಿಗಳಾಗಿರುತ್ತಾರೋ ಅಲ್ಲಿಯ ತನಕ ತಾನು ಯುದ್ಧರಂಗಕ್ಕೆ ಬರುವುದಿಲ್ಲ, ಯುದ್ಧ ಮಾಡುವುದಿಲ್ಲ ಎಂದು ಶಪಥ ಮಾಡುತ್ತಾನೆ.

ದುರ್ಯೋಧನ ಪಾಂಡವರ ಸೇನಾ ನಿರ್ಮಾಣ ಮತ್ತು ಅವರಲ್ಲಿರುವ ಮಹಾರಥರನ್ನು ತಿಳಿಸುತ್ತಾನೆ.

ಪಾಂಡವರ ಕಡೆ **ಮಹಾರಥಿಕರು 16 ಮಂದಿಯುನ್ನು** ತೋರಿಸುತ್ತಾನೆ ಪಂಚ ಪಾಂಡವರನ್ನು ಬಿಟ್ಟು.

1. **ಯುಯುಧಾನ** (ಸಾತ್ಯಕಿ) – ಕೃಷ್ಣ ಅರ್ಜುನರ ಶಿಷ್ಯ ಸತ್ಯ ಕಾಯದವನ ಮಗ
2. **ವಿರಾಟರಾಜ** – ಹಾಹಾಗಂಧರ್ವ ಬ್ರಹ್ಮಲೋಕದಲ್ಲಿದ್ದ, ಉತ್ತರೆಯ ತಂದೆ
3. **ದೃಪದರಾಜ – ಹೂಹೂಗಂಧರ್ವ,** ಅರ್ಜುನನ ಮಾವ, ದ್ರೌಪದೀ ತಂದೆ
4. **ದುಷ್ಟಕೇತು** – ಶಿಶುಪಾಲನ ಮಗ, ಚೇದಿರಾಜ, ಅನುಹ್ಲಾದ, ಪ್ರಹ್ಲಾದನ ಸೋದರ



5. **ಚೇಕಿತಾನ** – ಯದುವಂಶದ ಯಾದವ
6. **ಕಾಶೀರಾಜ** – ಕಾಳೀಭೀಮನ ಮಾವ (ಹೆಂಡತಿಯ ತಂದೆ)
7. **ಪುರುಜಿತ್** – ಕುಂತಿಯ ಸೋದರ
8. **ಕುಂತಿಭೋಜ** – ಕುಂತೀ (ಪ್ರಥಾದೇವಿ)ಯ ಸಾಕು ತಂದೆ ಯದುವಂಶ
9. **ಸೈಬ್ಯ** – ಕೃಷ್ಣನ ಮಾವ, ಭದ್ರಾದೇವಿಯ ತಂದೆ ರುಖುವಂಶ (ವಿಶ್ವೇದೇವತೆ)
10. **ಯುಧಾಮನ್ಯು** – ದೃಪದನ ಮಗ ಗಂಧರ್ವ ಪರಾವಶು
11. **ಉತ್ತಮ** – ದೃಪದನ ಮಗ ಗಂಧರ್ವ ವಿಶ್ವಾವಶು
12. **ಸೌಭದ್ರ** – ಅಭಿಮನ್ಯು, ಬುದ್ಧನ ಅವತಾರ, ಚಂದ್ರನ ಅಂಶ, ಸುಭದ್ರೆ ಮಗ ಉತ್ತರೆಯ ಗಂಡ
13. **ಪ್ರತಿವಿಂದ್ಯಾ**
14. **ಶೃತಸೋಮ**
15. **ಶೃತಕೀರ್ತಿ**
16. **ಶತಾನಿಕ**
17. **ಶೃತಕ್ರಿಯಾ**

(13–17) – ದ್ರೌಪದೇಯರು – ದ್ರೌಪದಿಯ ಐದು ಜನ ಮಕ್ಕಳು (ಉಪಪಾಂಡವರು) ಸಾಕ್ಷಾತ್ ಭಾರತೀದೇವಿ (ವಿಶ್ವೇ ದೇವತೆಗಳ ಅಂಶ)

**ಇನ್ನು ಕೌರವರ ಕಡೆ ಮಹಾರಥಿಕರು**

1. **ಭೀಷ್ಮಾಚಾರ್ಯರು** – ದೇವವ್ರತ, ದ್ಯೂ ಎಂಬ ವಸು, ಇಚ್ಛಾ ಮರಣ ಉಳ್ಳವನು.
2. ದ್ರೋಣಾಚಾರ್ಯರು – ಬೃಹಸ್ಪತಿ, ಪರಶುರಾಮರ ಶಿಷ್ಯ, ಭಾರದ್ವಾಜರ ಪುತ್ರ.
3. **ಕರ್ಣ** – ಕುಂತಿಯ ಪುತ್ರ (ಹಿರಿಯ) ಸೂರ್ಯ ಅವತಾರ, ಕೃಪಿಯ ಗಂಡ, ಅಂಗರಾಜ, ಸೂತಪುತ್ರನೆಂದೆನಿಸಿದವ (ಸಹಸ್ರವರ್ಮ – ನರಕಾಸುರನ ಆವೇಶ, ಪರಶುರಾಮರ ಶಿಷ್ಯ) ಅರ್ಧರಥಿಕನೆನೆಸಿದವ
4. **ಕೃಪ** – ಕೃಪಿಯ ಸೋದರ, ಶರದ್ವನರ ಮಗ.
5. **ಅಶ್ವತ್ಥಾಮ** – ದ್ರೋಣಾಚಾರ್ಯರ ಮಗ, ರುದ್ರಾವತಾರ, ವಿಷ್ಕುಂಭ, ಚಿರಂಜೀವಿಗಳಾದ ಏಳರಲ್ಲಿ ಒಬ್ಬ.
6. **ವಿಕರ್ಣ** – ರಾಮಾಯಣಕಾಲದಲ್ಲಿದ್ದ ಅತಿಕಾಯನೆಂಬ ರಾಕ್ಷಸ, 100 ಜನ ಕೌರವರಲ್ಲಿ ಮೂರನೇಯವನು.
7. **ಸೋಮದತ್ತ** (ಭೂರಿಶ್ರವ) ಬಾಹ್ಲೀಕನ ಮೊಮ್ಮಗ

ಬಂಧುಗಳು ಯಾರ್ಯಾರು ಯುದ್ಧದಲ್ಲಿ ಪಾಲ್ಗೊಂಡಿದ್ದರೆಂಬುದನ್ನು ಅರ್ಜುನನ ಮಾತಿನಲ್ಲಿ ವಿಚಾರ ಮಾಡೋಣ.

1. **ಪಿತ್ರ್ಯಾನ್ – ಪ್ರತೀಪರಾಜ** ಅಥ ಪಿತಾಮಹಾನ್

|

1. **ದೇವಾಪಿ**

(ಚಂದ್ರವಂಶದಲ್ಲಿ ಹುಟ್ಟಿದ ಪ್ರತೀಪ (i) ಶಂತನು
(ii) **ಬಾಹ್ಲೀಕ** ಮಕ್ಕಳು. ಪ್ರತೀಪನಿಗೆ ಕುಷ್ಠ ರೋಗದಿಂದಿದ್ದಾನೆಂದು ವ್ಯಕ್ತವಾದಾಗ ಸನ್ಯಾಸಿಯಾದ, ಶಂತನು ರಾಜನಾದ)

2. **ಬಾಹ್ಲೀಕ** – ಬಾಹ್ಲೀಕ ರಾಜನ ದತ್ತು ಮಗ

**ಸೋಮದತ್ತ**

**ಭೂರಿ** | **ಭೂರಿಶ್ರವ** | **ಶಲ್ಯ**

3. ಶಂತನು (ಕುರುವಂಶದ ರಾಜ)

**ಭೀಷ್ಮ** | **ವಿಚಿತ್ರವೀರ್ಯ** | **ಚಿತ್ರಾಂಗದ**

**ಇವರೆಲ್ಲ ಕೌರವ ಪಾಂಡವರಿಗೆ ಮುತ್ತಾತ, ತಾತ, ತಂದೆಯಂತಿದ್ದರು.**

2. **ಆಚಾರ್ಯಾನ್ :** ದ್ರೋಣಾಚಾರ್ಯರು – ವಿದ್ಯಾ ಗುರುಗಳು – ಅಷ್ಟ ವಸುಗಳಲ್ಲಿ ಒಬ್ಬ ಬೃಹಸ್ಪತಿ ಅಂಶ, ಕೃಪಿ ಪತಿ

**ಕೃಪಾಚಾರ್ಯ** – ಕುಲ ಗುರುಗಳು – ಗೌತಮ ವಂಶದ ಶರದ್ವಂತ್ ಋಷಿಪುತ್ರ ಕೃಪಿಯ ಅಣ್ಣ. ಶರದ್ವಂತ ಋಷಿಯ ತಪೋಭಂಗ ಮಾಡಲು ಬಂದ ಅಪ್ಸರೆಯನ್ನು ಮೋಹಿಸಿದ ಪರಿಣಾಮ ಅವರೀರ್ವರ ಸ್ಖಲನವಾಗಿ ಚಂಡೂವನದಲ್ಲಿ ಬಿದ್ದಿತು. ಒಂದು ಗಂಡು ಮತ್ತೊಂದು ಹೆಣ್ಣು ಮಗು ಜನಿಸಿದವು. ಶಂತನು ಇಬ್ಬರನ್ನೂ ಸಾಕಿ ಕೃಪ ಕೃಪಿ ಎಂದು ಬೆಳೆಸಿದ. ಮುಂದೆ ಶರದ್ವಂತ ತನ್ನ ಮಕ್ಕಳನ್ನು ಕೊಂಡೊಯ್ದನು. ಕೃಪನಿಗೆ ಧನುರ್ವಿದ್ಯಾಪಾರಂಗತನನ್ನಾಗಿ ಮಾಡಿ ಕೌರವ ಪಾಂಡವರಿಗೆ ವಿದ್ಯಾ ಗುರುಗಳಾದರು. ಕೃಪಿಯು ದ್ರೋಣಾಚಾರ್ಯರನ್ನು ಮದುವೆಯಾದಳು. ಕೃಪಾಚಾರ್ಯರು ಅರ್ಜುನನಿಂದ ಪರಾಜಿತರಾದರು.

**ಅಶ್ವತ್ಥಾಮ** – ಗುರು ಪುತ್ರರು – ಕೃಪಿ ಪುತ್ರ – ಹುಟ್ಟಿದ ಕೂಡಲೇ ಕುದುರೆಯಂತೆ ಅರಚಿದ ಕಾರಣ ಅಶ್ವತ್ಥಾಮ.

3. **ಮಾತುಲಾನ್** (ಸೋದರ ಮಾವಂದಿರು) : ಪುರುಜಿತ್ – ಕುಂತಿಭೋಜ
ಶಲ್ಯ ಮದ್ರರಾಜ – ಕುಂತಿಯ ಸೋದರ
ಶಕುನಿ ಮತ್ತು ಐದು ಮಂದಿ ತಮ್ಮಂದಿರು – ಗಾಂಧಾರಿಯ ಸೋದರರು



4. **ಭ್ರಾತೄನ್** (ಸೋದರರು) : ಐದು ಜನ ಪಾಂಡವರು
ನೂರು ಜನ ಧೃತರಾಷ್ಟ್ರನ ಮಕ್ಕಳು
ಯುಯುತ್ಸು ಧೃತರಾಷ್ಟ್ರನ ವೈಶ್ಯ ಪತ್ನಿಯಲ್ಲಿ ಜನಿಸಿದವ (ದಾಸೀಪುತ್ರ)

5. **ಪುತ್ರಾನ್** (ಮಕ್ಕಳು) : ದ್ರೌಪದಿಯ ಮಕ್ಕಳು
1. ಧರ್ಮರಾಜನಿಗೆ (ದ್ರೌಪದಿಯಿಂದ) – ಪ್ರತಿವಿಂದ್ಯಾ
2. ಭೀಮಸೇನನಿಗೆ (ದ್ರೌಪದಿಯಿಂದ) – ಸುತಸೋಮ
3. ಅರ್ಜುನನಿಗೆ (ದ್ರೌಪದಿಯಿಂದ) – ಶೃತಕೀರ್ತಿ
4. ನಕುಲನಿಗೆ (ದ್ರೌಪದಿಯಿಂದ) – ಶಕಾನಿಕ
5. ಸಹದೇವನಿಗೆ (ದ್ರೌಪದಿಯಿಂದ) – ಶೃತಕ್ರಿಯ
6. ಧರ್ಮರಾಜನಿಗೆ (ಶಿಶುಪಾಲನ ಮಗಳಾದ ಚೈಷ್ಯೆಯಲ್ಲಿ) – ಸುಹೋತ್ರ
7. ಭೀಮ (ಹಿಡಂಬಿಯಲ್ಲಿ) – ಘಟೋತ್ಕಜ
8. (ಬಲರಾಮನ ತಂಗಿ ದೇವಿಯಲ್ಲಿ)–ಸರ್ವೋತ್ತುಂಗ
9. (ಕಾಶೀರಾಜನ ಮಗಳು ಕಾಳಿ) – ಶರ್ವತ್ರಾತ
10. ಅರ್ಜುನ (ಸುಭದ್ರೆಯಲ್ಲಿ) – ಅಭಿಮನ್ಯು
11. (ಉಲೂಪಿಯಲ್ಲಿ) – ಇರಾವಂತ
12. (ಚಿತ್ರಾಂಗದೆಯಲ್ಲಿ) – ಬಭ್ರುವಾಹನ
13. ನಕುಲ (ಶಲ್ಯನ ಮಗಳು ಮಾದ್ರಿಯಲ್ಲಿ) – ನಿರಮಿತ್ರ
14. ಸಹದೇವ (ಮಾಗಧಿಯಲ್ಲಿ) – ಯೌಧೇಯ

**ಕೌರವರ ಸಂತತಿ**

1. **ಧೃತರಾಷ್ಟ್ರನಿಗೆ** (ಗಾಂಧಾರಿಯಿಂದ) : 100 ಜನ ಮಕ್ಕಳು. ದುರ್ಯೋಧನ ಹಿರಿಯವ
2. **ದುರ್ಯೋಧನನಿಗೆ**(ಭಾನುಮತಿಯಲ್ಲಿ) : ಲಕ್ಷಣ ಕುಮಾರ
3. ದುಶ್ಶಾಸನ (ಗಾಂಧಾರಿಯ ಎರಡನೇ ಮಗ) ಇವನಿಗೆ ಇಬ್ಬರು ಮಕ್ಕಳು

**ಮೊಮ್ಮಕ್ಕಳು**

1. **ಘಟೋತ್ಕಜ**ನ ಮಗ – ನಿಷ್ಠ
2. **ಕರ್ಣ**ನ ಮಗ – ವೃಷಸೇನ

| | | |
|---|---|---|
| **ಶ್ವಶುರಾನ್** (ಮಾವಂದಿರು) | 1. | ದೃಪದರಾಜ |
| | 2. | ಕಾಶೀರಾಜ |
| | 3. | ವೀರಸೇನ – ಪಾಂಡ್ಯರಾಜ (ಚಿತ್ರಾಂಗದನ ತಂದೆ) |
| | 4. | ಶಲ್ಯ– ಕಾಶೀರಾಜ (ದುರ್ಯೋಧನನ ಮಾವ) ಕಳಿಂಗರಾಜ |


**ಸಖರು** (ಮಿತ್ರರು) **ಸುಹೃದಾನ್** – ಸಹೃದಯರು. ಇವರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕೌರವರ ಪಕ್ಷದಲ್ಲಿದ್ದರು. ಕಳಿಂಗ (ಈಗಿನ ಒರಿಸ್ಸ), ಮಗಧ (ಬಿಹಾರ), ವಂಗದೇಶ (ಬಂಗಾಳ), ಕುಂತಳ (ಈಗಿನ ಉತ್ತರ ಕರ್ನಾಟಕ).

## ಯುದ್ಧ ಭೂಮಿಯಲ್ಲಿ ಈರ್ವರು ರಚಿಸಿದ ವ್ಯೂಹ ರಚನೆ

(A) **ಪದ್ಮವ್ಯೂಹ**

ಅತಿ ಮುಖ್ಯ ವಿಷಯ ವ್ಯೂಹಗಳ ನಕ್ಷೆ ಆಧಾರರಹಿತ (Not to any prescribed scale but described in Encyclopaedia of Hinduism - Kurukshetra battle ground - Volume 3 of 1938 A.D. collected by me on April 20-21 of 1952 A.D. at Bombay Historical Library. The shape was almost like a padma (Lotus) with inverted form)

**ಪದ್ಮವ್ಯೂಹ**






(B) **ಚಕ್ರವ್ಯೂಹ –** ಈ ವ್ಯೂಹವು ಪದ್ಮವ್ಯೂಹದಂತೆ ರಚನೆಯಾಗಿತ್ತು.

(C) **ವಜ್ರವ್ಯೂಹ –** Formation like a diamond shape. ಈ ವ್ಯೂಹಕ್ಕೆ ಮೂರು ದ್ವಾರಗಳು. ಎಲ್ಲ ಕಡೆ ಪದಾತಿ ಯೋಧರು ಹಿಂದಿನ ಸಾಲಲ್ಲಿ ಗಜಾರೂಢರು ರಕ್ಷಿಸುತ್ತಿದ್ದರು. ಇವರ ಹಿಂದಿನ ಸಾಲು ರಥಾರೂಢರು ಇರುತ್ತಿದ್ದರು.

(D) **ಸಾಲವ್ಯೂಹ –** ವ್ಯೂಹ ರಚನೆಯು ಮೊದಲ ಸಾಲು ಪದಾತಿಗಳು Infantry. ಹಿಂದೆ ಎರಡನೆಯ ಸಾಲು ಹಯ (ಕುದುರೆ)ಗಳ ಸಾಲು Cavalry. ಇದರ ಹಿಂದೆ ಮೂರನೆಯ ಸಾಲು ಗಜಾರೂಢರು Elephantry. ನಾಲ್ಕನೆಯ ಸಾಲಿನಲ್ಲಿ ರಥಿಕರು Chariotry ವ್ಯವಸ್ಥಿತವಾಗಿತ್ತು. ಶತ್ರು ಸೈನ್ಯ ಎದುರೆದುರಾಗಿ ಯುದ್ಧ ಮಾಡುತ್ತಿದ್ದರು. ಅವರು ಒಂದೊಂದಾಗಿ ಎದುರು ಸೈನ್ಯವನ್ನು ಎದುರಿಸಬೇಕಾಗಿತ್ತು. ಆಮೇಲೆ ಇತರರನ್ನು.

ಒಂದು ಆಶ್ಚರ್ಯ ಹಾಗೂ ಶ್ಲಾಘನೀಯ ಅಂಶ ಎಂದರೆ ಎರಡೂ ಸೈನ್ಯವು ಒಂದು ಶಿಸ್ತು ನಿಯಮದಿಂದ ಯದ್ವಾತದ್ವಾ ನುಗ್ಗಿ ಬಂದು ಕ್ರಮರಹಿತವಾಗಿ ಹೋರಾಡುತ್ತಿರಲಿಲ್ಲ.

ಒಂದು ದೃಷ್ಟಾಂತ ಗ್ರೀಸ್ (Greece) ಎಂಬ ಪುರಾತನ ರಾಜ್ಯವಿತ್ತು. ಅವರಿಗೂ ಮತ್ತು ಸ್ಪಾರ್ಟಾ (Sparta)ರಿಗೂ ಯುದ್ಧವಾಯಿತು. ಇದು ಟ್ರೋಜಾನ್ ಯುದ್ಧ (Trojan war) ಅಂತ ಸುಪ್ರಸಿದ್ಧ. ಅವರ ಸೇನಾ ರಚನೆಯನ್ನು Phalanx ಎಂದು ಹೇಳಲಾಗಿದೆ. ಈ ಕ್ರಮ ಮಹಾಭಾರತ ಯುದ್ಧ ಕ್ರಮವನ್ನು ಹೋಲುವುದು. ಆದರೆ ಗ್ರೀಕರು ಒಂದು ಬೃಹದಾಕಾರ ಮರದಿಂದ ಮಾಡಿದ ಕುದುರೆಯು ಆರು ಚಕ್ರಗಳಿಂದ ಎಳೆಯಲಾಗಿತ್ತು. ಆ ಕುದುರೆಯ ಹೊಟ್ಟೆಯಲ್ಲಿ (ನಾಲ್ಕು ಅಂತಸ್ತು) ಯೋಧರು ತುಂಬಿರುತ್ತಿದ್ದರು. ಇದು ಸ್ಪಾರ್ಟಾನರಿಗೆ ತಿಳಿಯಲಿಲ್ಲ. ಸ್ಪಾರ್ಟಾನರಿಗೆ ಕುದುರೆ ಆರಾಧ್ಯ ದೈವ. ಹಾಗೆಂದೇ ತಮ್ಮ ಶಿಬಿರದಲ್ಲಿ ಕೋಟೆಯೊಳಗೆ ಬರಮಾಡಿಕೊಂಡು ಮೋಸಹೋದರು. ಮಧ್ಯರಾತ್ರಿ ಈ ಕುದುರೆಯಲ್ಲಿರುವ ಯೋಧರು ಕುದುರೆಯಿಂದ ಹೊರಕ್ಕೆ ಬಂದು ಹಟಾತ್ತಾಗಿ ಊರ ಮೇಲೆ ಬಿದ್ದರು (attacked). ಇದರ ಪರಿಣಾಮವಾಗಿ ಸ್ಪಾರ್ಟಾ ನಿರ್ನಾಮವಾಯಿತು. ಅದೇ ರೀತಿ ಇಲ್ಲಿ ಕೌರವ ಸರ್ವನಾಶಯಿತು. ಎಂತಹ ವಿಚಿತ್ರ.




## ಮಹಾಭಾರತ ರಾಮಾಯಣ ಕಾಲದಲ್ಲಿ ಎರಡು ರೀತಿಯ ಆಯುಧಗಳು ಇದ್ದಿತು.

(1) **ಶಸ್ತ್ರಗಳು** – ಬಾಣ, ಬಿಲ್ಲು, ಕಠಾರಿ ಸಾಮಾನ್ಯ ಆಯುಧಗಳು. ಇವೇ ಶಸ್ತ್ರಗಳು ದೈವೀಶಕ್ತಿ ಪಡೆದಾಗ (ಬ್ರಹ್ಮ ರುದ್ರಾದಿ ದೇವತೆಗಳು ಅನುಗ್ರಹಿಸಿದಾಗ) ದಿವ್ಯಶಕ್ತಿಯುತವಾಗಿ ಅಸ್ತ್ರಗಳೆನಿಸಿಕೊಳ್ಳುತ್ತಿದ್ದವು.




(2) **ಅಸ್ತ್ರಗಳು** – ದೈವೀಶಕ್ತಿಯಿಂದ ದೇವತೆಗಳು ಅನುಗ್ರಹಿಸಿದ ವಿಚಿತ್ರ ವೀರ್ಯ ಶಕ್ತಿಗಳುಳ್ಳವುಗಳು. ಮಂತ್ರಶಕ್ತಿವುಳ್ಳವುಗಳು.

ಶಸ್ತ್ರ ಹಾಗೂ ಅಸ್ತ್ರಗಳ ಕೆಲವು ಚಿತ್ರಗಳನ್ನು ಈ ಕೆಳಗೆ ತೋರಿಸಲಾಗಿದೆ.


## ಶಸ್ತ್ರಗಳು

| | |
|---|---|
| ಧನುಸ್ಸು |  |
| ಬಾಣ |  |
| ಭಲ್ಲೆ ಈಟಿ |  |
| ಖಡ್ಗ |  |
| ಸೂರ್ಪ ವಜ್ರಾ |  |
| ಮಕಾಶ |  |
| ವಿಘಾತ |  |
| ಗದಾ |  |



| | |
|---|---|
| ಕಂಟಕ ಸಿರಾಸ್ತ್ರ |  |
| ಶೃಂಖಲ ಕಂಟಕ |  |
| ಮುಸಲಾಯುಧ |  |
| ಹಲಾಯುಧ |  |
| ಕಠಾರಿ |  |
| ಪರಶು |  |
| ಅಂಕುಶ |  |
| ತ್ರಿಶೂಲ |  |

# ಅಸ್ತ್ರಗಳು

| | |
|---|---|
| ದಿವ್ಯಾಸ್ತ್ರ |  |
| ವಾಯುವ್ಯಾಸ್ತ್ರ |  |
| ಆಗ್ನೇಯಾಸ್ತ್ರ |  |
| ವರುಣಾಸ್ತ್ರ |  |
| ಅರ್ಧಚಂದ್ರಾಸ್ತ್ರ |  |
| ನಾಗಾಸ್ತ್ರ |  |
| ಬ್ರಹ್ಮಾಸ್ತ್ರ |  |
| ಪಾಶುಪತಾಸ್ತ್ರ |  |



ಇನ್ನು ಈ ಉಪನ್ಯಾಸವನ್ನು ಉಪಸಂಹಾರ ಮಾಡುವ ಮುನ್ನ ಕೌರವ ಪಾಂಡವರು ಕೆಲ ಯುದ್ಧ ನಿಯಮಗಳನ್ನು ಪಾಲಿಸಲೇಬೇಕೆಂದು ಆಜ್ಞ ಮಾಡಿದರು ಭೀಷ್ಮಾಚಾರ್ಯರು. (ಭೀಷ್ಮಪರ್ವ, ಪ್ರಥಮ ಅಧ್ಯಾಯ 23ರಿಂದ 34ನೇ ಶ್ಲೋಕದವರೆಗೆ ನಿಯಮ ನಿರ್ಬಂಧಗಳನ್ನು ತಿಳಿಸುತ್ತಾರೆ)

(1) ಪದಾತಿಗಳು ಪದಾತಿಗಳೊಂದಿಗೆ ಯುದ್ಧ ಮಾಡಬೇಕು. ರಥಿಕರು ರಥಿಕರೊಂದಿಗೆ ರಥಿಕ ಸಾರಥಿಯನ್ನು ಹೊಡೆಯಬಾರದು. ಕುದುರೆ ಯೋಧರಿಗೂ ಆನೆಯ ರಥಿಕರಿಗೂ ಇದೇ ನಿಯಮ ಪಾಲಿಸಬೇಕು.

(2) ರಣರಂಗದಿಂದ ಹಿಂತಿರುಗಿ ಓಡಿಹೋದವರನ್ನು ವಧಿಸಬಾರದು. ನಿರಾಯುಧರಾದವರೊಂದಿಗೆ ಆಯುಧದಿಂದ ಹೊಡೆಯಬಾರದು

(3) ಯುದ್ಧವು ಪ್ರಾತಃಕಾಲ ಸೂರ್ಯೋದಯಾ ನಂತರ ಕಹಳೆ ಊದಿದ ನಂತರ ಪ್ರಾರಂಭಿಸಬೇಕು. ಸೂರ್ಯಾಸ್ತಮವಾದ ಮೇಲೆ ಯುದ್ಧವನ್ನು ನಿಲ್ಲಿಸಬೇಕು.

(4) ರಾತ್ರಿಯಲ್ಲಿ ಯುದ್ಧ ಮಾಡುವಂತಿಲ್ಲ.

(5) ರಣರಂಗದಲ್ಲಿ ಗಾಯಗೊಂಡವರಿಗೆ ವೈದ್ಯಕೀಯ ಉಪಚಾರಾದಿಗಳನ್ನು ಮಾಡತಕ್ಕದ್ದು. ಮರಣ ಹೊಂದಿದವರಿಗೆ ಯೋಗ್ಯ ಸಂಸ್ಕಾರ ನಡೆಸಬೇಕು ಹಾಗೂ ಅವರ ಬಂಧುಗಳಿಗೆ ತಿಳಿಸತಕ್ಕದ್ದು.

**ವಾಚಾ ಯುದ್ಧ ಪ್ರವೃತ್ತಾನಾಂ ವಾಚೈವ ಪ್ರತಿಯೋಧನಂ ।**
**ನಿಷ್ಕ್ರಾಂತಾಃ ಪೃತನಾಮಧ್ಯಾಹ್ನೆ ಹಂತವ್ಯಾಃ ಕದಾಚನಾ ॥**
**ಕ್ಷೀಣ ಶಸ್ತ್ರೋ ವಿವರ್ಮಾಚನ ಹಂತವ್ಯಃ ಕದಾಚನ ।**
**ನ ಸೂತೇಷು ನ ಧುರ್ಯೋಷು ನ ಚ ಶಸ್ತ್ರೃಪನಾಯಿಷು ।**
**ನ ಭೇರಿ ಶಂಖವಾದೇಷು ಪ್ರವರ್ತವ್ಯಂ ಕಥಂಚನ ।**
**ಏವಂತೇ ಸಮಯಂ ಕೃತ್ವಾ ಕುರುಪಾಂಡವಸೋಮಕಾಃ॥**

ಈ ರೀತಿ ನಿಯಮಗಳಿಗೆ ಬದ್ಧರಾಗಿ ಉಭಯ ಪಕ್ಷದವರು ಯುದ್ಧಕ್ಕೆ ಹೊರಟರು.

**"ವಿಸ್ಮಯಂ ಪರಮಂ ಜಗ್ಮುಃ ಪ್ರೇಕ್ಷಮಾಣಾಃ ಪರಸ್ಪರಂ"**

ಸಭೆಯಿಂದ ತೆರಳುವ ಮುನ್ನ ಪರಸ್ಪರ ಆಶ್ಚರ್ಯದಿಂದ ಎಷ್ಟರ ಮಟ್ಟಿಗೆ ಇವೆಲ್ಲಾ ನಿಯಮ ಪಾಲಿಸಲು ಸಾಧ್ಯವೆಂದು ಚಿಂತಿಸುತ್ತಾ ಹೊರಗೆ ನಡೆದರು. ಏಕೆಂದರೆ

(1) ಭೀಷ್ಮರು ಹತ್ತನೆಯ ದಿನ ಶಿಖಂಡಿಯೊಂದಿಗೆ ಯುದ್ಧ ಮಾಡುವುದಿಲ್ಲವೆಂದು ಶಸ್ತ್ರ ಪರಿತ್ಯಾಗ ಮಾಡಿದಾಗ ಅರ್ಜುನ ಅವರನ್ನು ಹೊಡೆದು ಕೆಡುಹಿದ.

(2) ಹದಿನಾಲ್ಕನೆಯ ದಿನ ದ್ರೋಣಾಚಾರ್ಯರು ತಮ್ಮ ಮಗ ಅಶ್ವತ್ಥಾಮ ಹತನಾದ ಎಂಬ ವಾರ್ತೆ ಕೇಳಿ ಶಸ್ತ್ರ ಸನ್ಯಾಸ ಮಾಡಿದಾಗ ದೃಷ್ಟದ್ಯುಮ್ನ ಸಂಹರಿಸಿದ. ಅಭಿಮನ್ಯು ಚಕ್ರವ್ಯೂಹದಲ್ಲಿ ಏಕಾಕಿಯಾಗಿ ಅದಮ್ಯನಾಗಿ ಹೋರಾಡಿದ, ಶಸ್ತ್ರಾಸ್ತ್ರಗಳನ್ನು ಕಳೆದುಕೊಂಡ, ನಿರಾಯುಧನಾದವನನ್ನು ದ್ರೋಣ, ಕರ್ಣ, ದುಶ್ಶಾಸನ, ಶಕುನಿ, ದುರ್ಯೋಧನ ನಿಷ್ಕರುಣೆಗಳಾಗಿ ಕೊಂದರು.

(3) ಕರ್ಣನನ್ನು ಪರಾಜಯ ಮಾಡಲು ಘಟೋತ್ಗಜ ಮಾಯಾಯುದ್ಧ ರಾತ್ರಿಯಲ್ಲೇ ನಡೆಯಿತು. ಕರ್ಣನ ರಥವು ಭೂಮಿಯಲ್ಲಿ ಕುಗ್ಗಿತು. ಚಕ್ರವನ್ನು ಎತ್ತಲು ಪ್ರಯತ್ನ ಮಾಡುವಾಗ ಕರ್ಣನು ನಿರಾಯುಧನಾಗಿದ್ದ. ಆಗ ಶ್ರೀಕೃಷ್ಣನ ಪ್ರೇರಣೆಯಂತೆ ಅರ್ಜುನ ಅವನನ್ನು ಸಂಹರಿಸಿದ. ಶಲ್ಯ ಕರ್ಣನ ರಥಸಾರಥಿಯಾಗಿ ಪ್ರೋತ್ಸಾಹ ನೀಡಬೇಕಾಗಿತ್ತು. ತದ್ವಿರುದ್ಧವಾಗಿ ಕರ್ಣನನ್ನು ಉದ್ರೇಕಿಸಿ ಹೀಯಾಳಿಸುತ್ತಿದ್ದ. ಚರಿತ್ರ ವಧೆ ಮಾಡಿದ (Character Assasination)

(4) ಹದಿನೆಂಟನೆಯ ದಿನ ಸಂಜೆ ಭೀಮಸೇನನಿಗೂ ದುರ್ಯೋಧನನಿಗೂ ಗದಾಯುದ್ಧ. ಇಲ್ಲಿ ಗದೆಯಿಂದ ಸೊಂಟದ ಕೆಳಗೆ ಹೊಡೆಯಬಾರದೆಂಬ ನಿಯಮ. ಆದರೆ ಭೀಮಸೇನನು ದುರ್ಯೋಧನನ ಎರಡೂ ತೊಡೆಗಳನ್ನು ಹೊಡೆದ ಕಾರಣ ದುರ್ಯೋಧನನ ಪತನವಾಯಿತು.

ಹೀಗೆ ನಿಯಮ ಉಲ್ಲಂಘನೆ ಜರುಗಿತು. ಕಾರಣ ಏನೇ ಇರಬಹುದು. ಇದಕ್ಕೆ ತಕ್ಕ ಸಮಾಧಾನ ಶ್ರೀಮದಾಚಾರ್ಯರು ತಾತ್ಪರ್ಯನಿರ್ಣಯದಲ್ಲಿ ತೋರಿಸಿರುತ್ತಾರೆ. ಹದಿನೆಂಟನೆಯ ದಿನ ಮಧ್ಯರಾತ್ರಿ ಅಮಾವಾಸ್ಯೆ. ದುರ್ಯೋಧನನ ಮರಣವಾಯಿತು. ಕೌರವರ ಕಡೆ ಎಲ್ಲರೂ ನಿರ್ನಾಮವಾದರು. ಅಶ್ವತ್ಥಾಮ, ಕೃಪಾಚಾರ್ಯರು, ಕೃತವರ್ಮ ಇವರಷ್ಟೇ ಉಳಿದಿದ್ದರು. ಜಗತ್ತಿನ ಇತಿಹಾಸದ ಯುದ್ಧಗಳಲ್ಲಿ ಬೃಹತ್ ಗಾತ್ರದಷ್ಟು ಜನನಾಶ ಕಾಣಲಾಗದು. ಇದೆಲ್ಲಾ ನಡೆದಿದ್ದು ಕೇವಲ ಹದಿನೆಂಟು ದಿನಗಳಲ್ಲಿಯೇ ಎಂಬುದು ಗಮನಾರ್ಹ.

## ಗೀತಾ ಉಪದೇಶ ಪ್ರಸಂಗ ಪೂರ್ವೀಭಾವ ಕಥನ

ಮಾಯಾಜೂತದಲ್ಲಿ ಕೌರವರು ಪಾಂಡವರನ್ನು ಪರಾಜಯಗೊಳಿಸಿದ ನಂತರ ಹನ್ನೆರಡು ವರ್ಷ ವನವಾಸ. ಆಮೇಲೆ ಹದಿಮೂರನೇ ವರ್ಷ ಅಜ್ಞಾತವಾಸ ಮಾಡಿ ನಿಯಮ ಪ್ರಕಾರ ಮುಗಿಯಿತು. ಆಶ್ವಯುಜ ಮಾಸ ಶುಕ್ಲ ದಶಮಿಯಂದು ಉತ್ತರ ಗೋಗ್ರಹಣ ಸಮಯದಲ್ಲಿ ಅರ್ಜುನ (ಬೃಹನ್ನಲೆ)ಯ ಮೂಲಕ ಪಾಂಡವರು ತಮ್ಮ ನಿಜ ರೂಪಗಳಿಂದ ವ್ಯಕ್ತಗೊಂಡರು. ಭೀಷ್ಮಾಚಾರ್ಯರು ಹೇಳಿದಂತೆ ಅಜ್ಞಾತ ವಾಸದಿಂದ ವನವಾಸವನ್ನು ಪೂರ್ಣಮಾಡಿದರು ಎಂದು ಹೇಳಿದರು.



ಅದನ್ನು ಸಮ್ಮತಿಸದೇ ದುರ್ಯೋಧನಾದಿಗಳು ಪಾಂಡವರಿಗೆ ಇಂದ್ರಪ್ರಸ್ಥ ಹಿಂತಿರುಗಿಸಲೂ ಒಪ್ಪಲಿಲ್ಲ. ಯುದ್ಧ ಮೂಲಕ ತಮ್ಮ ರಾಜ್ಯ ಪಡೆಯಲಿ ಎಂದು ಖಡಾಖಂಡಿತ ನುಡಿದ.

ಈ ಮಧ್ಯೆ ಧೃತರಾಷ್ಟ್ರನು ಸಂಜೆಯನ ಮೂಲಕ "ನೀವು 14 ವರ್ಷ ವನವಾಸದಲ್ಲಿದ್ದು ಅಭ್ಯಾಸವಾಗಿದೆ. ಆದ್ದರಿಂದ ಅಲ್ಲಿಯೇ ಶೇಷ ವರ್ಷಗಳನ್ನು ಕಳೆಯಿರಿ. ಮತ್ತೆ ರಾಜ್ಯ ಏಕೆಬೇಕು? ಅಲ್ಲಿರುವಲ್ಲಿ ಎಲ್ಲಾ ಸವಲತ್ತುಗಳನ್ನು ಒದಗಿಸಲಾಗುವುದು" ಎಂದು ಹೇಳಿ ಕಳಿಸಿದಾಗ ಧರ್ಮರಾಜ ಸಮ್ಮತಿಸಲಿಲ್ಲ.

ಶ್ರೀಕೃಷ್ಣ ಪಾಂಡವರು ವನವಾಸ ಪೂರ್ತಿಗೊಳಿಸಿದುದನ್ನು ತಿಳಿದು ಅವರನ್ನು ನೋಡಲು ಬರುತ್ತಾನೆ. ಕುಶಲ ಪ್ರಶ್ನೆ ಆದ ನಂತರ "**ಧರ್ಮರಾಜ ಮುಂದೇನು ಮಾಡುವಿರಿ?** ನಿಮಗೆ ನಿಮ್ಮ ರಾಜ್ಯ ಬೇಡವೇ ? ಏನು ನಿಮ್ಮೆಲ್ಲರ ಅಭಿಪ್ರಾಯ ?" ಎಂದು ಕೇಳುತ್ತಾನೆ. ಧರ್ಮನಂದನ "ಸ್ವಾಮಿ ನಿಜ ಹೇಳಬೇಕೆಂದರೆ ನಮಗೆ ಯುದ್ಧ ಲಾಲಸೆ ಇಲ್ಲ. ದುರ್ಯೋಧನ ರಾಜ್ಯ ಕೊಡುವುದಿಲ್ಲ. ಯುದ್ಧದಿಂದ ಬಂಧುಬಾಂಧವರ ವೃಥಾಹತರಾಗುತ್ತಾರೆ. ಹೋಗಲಿ ಅವರೇ ನಮಗೆ ಐದು ನಗರಗಳನ್ನಾದರೂ ಕೊಡಲಿ" ಎಂದು. ಭೀಮಸೇನ ಹೇಳುತ್ತಾನೆ "ಹೇ ಜಗನ್ನಿಯಾಮಕ ಸ್ವಾಮಿ. ಸರ್ವಜ್ಞನಾದ ನಿನಗೆ ತಿಳಿಯದೇ ಇರುವುದು ಯಾವುದು? ಅಂದು ತುಂಬಿದ ಧೃತರಾಷ್ಟ್ರ ಸಭೆಯಲ್ಲಿ ಪಾಂಚಾಲಿಯನ್ನು ಏಕವಸ್ತ್ರಳಾಗಿಸಿದ. ನಾವು ಪರಾಜಿತರಾಗಿದ್ದೆವು ನಿಜ. ಆದರೆ ದುಶ್ಶಾಸನ ನಮ್ಮ ಸತೀಮಣಿಯನ್ನು ಮುಟ್ಟಿ ಅವಳ ಹೆರಳ ಮುಡಿಯನ್ನು ಹಿಡಿದು ಸಭೆಗೆ ಎಳೆದು ತಂದನಲ್ಲಾ ಆಗ ಅವನನ್ನು ಅಲ್ಲೆ ಸಂಹರಿಸುತ್ತಿದ್ದೆ. ಆದರೆ ನಿರುಪಾಯನಾಗಿ ಸುಮ್ಮನಾದೆ... ದುರ್ಯೋಧನ ದ್ರೌಪದಿಯನ್ನು ತನ್ನ ತೊಡೆಯ ಮೇಲೆ ಕೂಡು ದಾಸಿ ಎಂದು ತನ್ನ ತೊಡೆಯ ಕಡೆಗೆ ತೋರಿಸಿದಾಗ ತಡೆಯಲಾರದೆ ಪ್ರತಿಜ್ಞೆ ಮಾಡಿದ್ದೆ. ಈ ಮುಂದೆ ನಡೆಯುವ ರಣದಲ್ಲಿ ದುಶ್ಶಾಸನನನ್ನು ಸಂಹರಿಸಿ ಅವನ ರಕ್ತದಿಂದ ದ್ರೌಪದಿಯ ತಲೆ ಮುಡಿಗೆ ಹಚ್ಚುತ್ತೇನೆ ಹಾಗೂ ದುರ್ಯೋಧನನ ತೊಡೆಗಳನ್ನು ನನ್ನ ಗದೆಯಿಂದ ತುಂಡರಿಸುತ್ತೇನೆ ಅಂತ ಅಂದದ್ದು ನಿನಗೆ ತಿಳಿದೇ ಇದೆ ಕೇಶವ" ಎಂದ. ಅರ್ಜುನ ಹೇಳಿದ ಕೃಷ್ಣ ನನ್ನ ಗಾಂಢೀವವನ್ನು ಹದಿನಾಲ್ಕು ವರ್ಷಗಳ ನಂತರ ತೆಗೆದುಕೊಂಡು ನನ್ನ ಭುಜಕ್ಕೆ ಸೇರಿಸಿದೆ. ಈಗ ಗಾಂಢೀವವು ನನ್ನ ಕಿವಿಯಲ್ಲಿ ಪಿಸು ಮಾತಿನಿಂದ ಗೊಣಗುತ್ತಿದ್ದೆ. ಎಂತಹ ಷಂಢನ ಭುಜದಲ್ಲಿ ಕೂತಿರುವೆ ಅಂತ. ನಾವು ಹಸ್ತಿನಾವತಿಯನ್ನು ಬಿಟ್ಟು ಅರಣ್ಯಕ್ಕೆ ಹೋಗುವಾಗ ನಗರದ ಮಣ್ಣಿನ ಕಣಗಳನ್ನು ಬೊಗಸೆಯಲ್ಲಿ ಹಿಡಿದು ಮೂರು ದಿಕ್ಕುಗಳಲ್ಲಿ ಚೆಲ್ಲಿದೆ. ಈ ಮಣ್ಣಿನಲ್ಲಿ ಎಷ್ಟು ಕಣಗಳಿವೆಯೋ ಅಷ್ಟು ಶರಗಳಿಂದ ಕೌರವರನ್ನು ಹೊಡೆಯುವೆ ಎಂದು ಪ್ರತಿಜ್ಞೆ ಮಾಡಿದೆ. ಇದರ ಮೇಲೆ ನಮ್ಮ ಪ್ರತಿಜ್ಞೆ ಸಫಲವೋ ನಿಷ್ಫಲವೋ ಆಗಲಿಕ್ಕೆ ನೀನೇ ವಿಚಾರಮಾಡು.

ನಕುಲ ಸಹದೇವರೂ ಸಹ ಅರ್ಜುನನ ಮಾತನ್ನು ಒಪ್ಪಿದರು. ದ್ರೌಪದಿಯು ಭಗವಾನ್ ಅಂದಿನಿಂದ ಇವತ್ತಿನವರೆಗೆ ನಾನು ಹೆರಳನ್ನು ಮುಡಿಕಟ್ಟಿಲ್ಲ. ನೀನು ಅಂದು ಆಪತ್ತಿನಲ್ಲಿ ತುಂಬಿದ ಸಭೆಯಲ್ಲಿ ಅಕ್ಷಯಾಂಬರ ದಯಪಾಲಿಸದೇ ಇದ್ದಲ್ಲಿ ನನ್ನ ಗತಿ ಏನಾಗುತ್ತಿತ್ತು ಮಾಧವ. ಇಷ್ಟರ ಮೇಲೆ ಸರ್ವಜ್ಞನಾದ ಸ್ವಾಮಿ ನಿನ್ನ ಸಂಕಲ್ಪದಂತೆ ನಡೆಯಲಿ ಎಂದು ಹೇಳಲಾಗಿ ಶ್ರೀ ಕೃಷ್ಣ ನಿರ್ಣಯ ಕೊಡುತ್ತಾನೆ. ಆಯಿತು ಯುದ್ಧವೇ ನಿಶ್ಚಯವಾಗಬೇಕು. ಅದು ಹೇಗೆ ಅಂದಾಗ ಪಾಂಡವರು "ಪರಮಾತ್ಮ ನಮ್ಮ ಹಿತೈಷಿ ನಿನ್ನನ್ನು ಬಿಟ್ಟರೆ ಯಾರು ದೇವಾ! ತಸ್ಮಾತ್ ನಮ್ಮ ಪರವಾಗಿ ನೀನೇ ಸಂಧಾನಕ್ಕಾಗಿ ಹೋಗಬೇಕು. ನೀನು ಎರಡು ಪಕ್ಷಕ್ಕೂ ಬೇಕಾದವನು. ಯುದ್ಧವೋ ಸಂಧಾನವೋ ನೀನೇ ನಿಶ್ಚಯಿಸು" ಎಂದು ಹೇಳಿದರು. ಆಗ ಶ್ರೀಕೃಷ್ಣ ಹೇಳುತ್ತಾನೆ. ಯುದ್ಧವನ್ನೇ ನಿರ್ಧರಿಸಿ ಬರುತ್ತೇನೆ ಎಂದು.

ಇಲ್ಲಿ ಒಂದು ಪ್ರಶ್ನೆ. ಯುದ್ಧವನ್ನೇ ನಿಶ್ಚಯ ಮಾಡಲಿಕ್ಕೆ ಕೌರವರಿಗೆ ಲಿಖಿತ ಮೂಲಕ ಅಥವಾ ಚಾರರ ಮೂಲಕ ಹೇಳಿ ಕಳಿಸಬಹುದಾಗಿತ್ತು. (They should have sent an ultimatum. Why Krishna should go in person ?) ಶ್ರೀಕೃಷ್ಣನೇ ಸ್ವಯಂ ಏಕೆ ಹೋಗಬೇಕಿತ್ತು? ಅಂದರೆ ಶ್ರೀಮದಾಚಾರ್ಯರು ಈ ವಿಷಯವನ್ನು ವಿವರಿಸುತ್ತಾರೆ.

ಪ್ರಥಮತಃ ಯುದ್ಧವನ್ನೇ ಅಪೇಕ್ಷಿಸಿದ್ದು ಯಾರು? ಪಾಂಡವರಿಗೆ ಯುದ್ಧದ ದಾಹ ಇಲ್ಲವೆಂಬುದು ಧರ್ಮರಾಜನ ಮಾತಿನಿಂದ ತಿಳಿಯುತ್ತೆ. ಅವರಿಗೆ ಶ್ರೀಕೃಷ್ಣನು ಹೇಗೆ ನಿಶ್ಚಯಿಸುತ್ತಾನೋ ಅದಕ್ಕೆ ಪೂರ್ಣ ಸಮ್ಮತಿ ಇದ್ದಿತು. ಆದರೆ ಕೌರವರಿಗೆ ತತ್ರಾಪಿ ದುಷ್ಟಚತುಷ್ಟಯರಾದ ದುರ್ಯೋಧನ, ದುಶ್ಶಾಸನ, ಶಕುನಿ, ಕರ್ಣ ಇವರಿಗೆ ರಣವೇ ಬೇಕಿದ್ದಿತು. ಕಾಲು ಕೆದರಿ ಕಾದಾಡುವ ಸ್ವಭಾವದವರು.

ದುರ್ಯೋಧನ ಯಾರು ? ಕಲಿಪುರುಷನ ಅಂಶದಿಂದ ಜನಿಸಿದವ (ಆದಿ 68). ದೇವರ ದ್ವೇಷಿ. ಕೃಷ್ಣನನ್ನು ಕಂಡರೆ ಆಗುತ್ತಿದ್ದಿಲ್ಲ. ಅವನು ಕೃಷ್ಣನನ್ನು ಒಬ್ಬ ಗೊಲ್ಲ, ಮಾಯಾವಿ ಇತ್ಯಾದಿಯಾಗಿ ನಿಂದಿಸುತ್ತಿದ್ದ. ಈಗ ಶ್ರೀಕೃಷ್ಣನು ಸಂಧಾನಕ್ಕಾಗಿ ಏಕೆ ಸಮ್ಮತಿಸಿದನೆಂದರೆ ಪಾಂಡವರು ಕಳೆದುಕೊಂಡಿದ್ದ ರಾಜ್ಯವನ್ನು ನಿಯಮ ಪ್ರಕಾರ ತಮಗೆ ಸಲ್ಲಬೇಕು. ಧೃತರಾಷ್ಟ್ರನನ್ನು ಕೇಳಬೇಕು ಎಂದು. ಆದರೆ ಜ್ಯೇಷ್ಠ ಪುತ್ರನಾದ ದುರ್ಯೋಧನ ಹಠಮಾರಿ ಒಪ್ಪುವುದಿಲ್ಲ ಎಂಬುದು ಭಗವಂತನಿಗೆ ತಿಳಿದಿತ್ತು. ಆದರೆ ಕಲಿರೂಪನಾದ ದುರ್ಯೋಧನನ ಸ್ವಭಾವವನ್ನು ಜಗತ್ತಿಗೆ ತೋರಿಸಬೇಕು. ಹಾಗೆ ಮಾಡದೇ ಇದ್ದಲ್ಲಿ ಕೃಷ್ಣನಿಗೆ ಅಪವಾದ ಬರುತ್ತಿತ್ತು. ಏನಂತ? ಕೃಷ್ಣನಿಗೆ ಪಾಂಡವರು ಹೇಗೋ ಅದೇ ರೀತಿ ಕೌರವರೂ ಬೇಕಾದವರು. ಪ್ರಾಯಶಃ ಕೃಷ್ಣನ ಮಾತಿಗೆ ಮನ್ನಣೆ ಕೊಡುತ್ತಿದ್ದನೋ ಏನೋ! ಆಗ ಯುದ್ಧ ನಿವಾರಣೆ ಆಗುತ್ತಿತ್ತು. ವೃಥಾಮಾರಣ ಹೋಮ ನಡೆಯುತ್ತಿದ್ದಿಲ್ಲ. ಇಲ್ಲಿ ಶ್ರೀಕೃಷ್ಣನ ಪಾತ್ರ ಅತಿಮುಖ್ಯ. ಸಂಧಾನ ಮಾಡಿದ್ದು ಸರಿಯಾಗುತ್ತಿತ್ತು. ದುರ್ಯೋಧನ



ಕೃಷ್ಣನ ಮಾತಿಗೆ ಗೌರವ ಕೊಡುತ್ತಿದ್ದನೋ ಏನೋ ಎನ್ನುವುದು ಇಲ್ಲಿ ತಿಳಿಯಬೇಕು. ಹಾಗೆಂದೇ ಶ್ರೀಕೃಷ್ಣ ಸಂಧಾನಕ್ಕೆ ಹೋಗಿದ್ದು. ದುರ್ಯೋಧನನ ಸ್ವಭಾವ ಲೋಕಕ್ಕೆ ಪ್ರಕಟಿಸಿದ್ದು ಯೋಗ್ಯವೇ ಆಯಿತು. ಶ್ರೀಕೃಷ್ಣ ಧೃತರಾಷ್ಟ್ರನ ಸಭೆಗೆ ಬರುತ್ತಾನೆ. ಸಭೆಯಲ್ಲಿ ಸಿಂಹಾಸನಾರೂಢನಾಗಿ ಧೃತರಾಷ್ಟ್ರ ಮಂತ್ರಿಯಾಗಿ ವಿದುರ, ಭೀಷ್ಮಾಚಾರ್ಯ, ದ್ರೋಣಾಚಾರ್ಯ, ಕೃಪಾಚಾರ್ಯ, ಅಶ್ವತ್ಥಾಮ ಒಂದು ಕಡೆ. ಇತ್ತ ಕಡೆ ದುರ್ಯೋಧನ, ಶಕುನಿ, ದುಶ್ಶಾಸನ, ಕರ್ಣ ಮತ್ತು 99 ಜನ ಕೌರವರು ಉಪಸ್ಥಿತರಾಗಿರುತ್ತಾರೆ. ಶ್ರೀ ಕೃಷ್ಣ ಬಂದಾಗ ಯೋಗ್ಯ ಸ್ವಾಗತ ಆಸನಾದಿಗಳನ್ನು ಕೊಡಲಾಯಿತು. ಪ್ರಥಮವಾಗಿ ಶ್ರೀಕೃಷ್ಣ ಮಾತನಾಡಿ ಪಾಂಡವರ ಅಪೇಕ್ಷೆಯನ್ನು ತಿಳಿಸಲು ತಾನು ಅವರ ಪರವಾಗಿ ಧೂತನಾಗಿ ಬಂದಿರುತ್ತೇನೆ. **"ಧೃತರಾಷ್ಟ್ರ ವಿನಾಕಾರಣ ಯುದ್ಧ ಬೇಡ. ಧರ್ಮಪ್ರಕಾರ ಅವರಿಗೆ ಸಲ್ಲತಕ್ಕ ರಾಜ್ಯ ಕೊಡಬೇಕು"** ಎಂದು ಹೇಳಿದ. ದುರ್ಯೋಧನ ಉತ್ತರ ಕೊಡುತ್ತಾನೆ. ಕೃಷ್ಣ ಕೇಳು. ನಾನು ಧರ್ಮಾಧರ್ಮದ ಬಗ್ಗೆ ನಿನ್ನಿಂದ ಕಲಿಯಬೇಕಾದ್ದು ಇಲ್ಲ.


**ಜಾನಾಮಿ ಧರ್ಮ್ಯಂ ನ ಚ ಯೇ ಪ್ರವೃತ್ತಿಃ ।**
**ಅಧರ್ಮಮಪಿ ಜಾನಾಮಿ ನ ಚಮೇ ನಿವೃತ್ತಿಃ ॥**


ಧರ್ಮ ಏನೆಂದು ನನಗೆ ತಿಳಿದಿದೆ ? ಆದರೆ ಅದರ ಬಗ್ಗೆ (ಅದರಂತೆ ನಡೆಯಬೇಕೆಂದು) ನನಗೆ ಆಸಕ್ತಿ ಇಲ್ಲ. ಅದೇ ರೀತಿ ಅಧರ್ಮವೇನೆಂದೂ ತಿಳಿದಿದೆ. ಅದನ್ನು ಬಿಡಲೂ ಮನಸ್ಸಿಲ್ಲ ಬಿಡುವುದೂ ಇಲ್ಲ. ಆದ್ದರಿಂದ ಪಾಂಡವರಿಗೆ ರಾಜ್ಯ ಬೇಕಾದರೆ ರಣರಂಗದಲ್ಲಿ ಕಾದಾಡಿ ಗೆದ್ದು ಪಡೆಯಲಿ. ಇದು ನಮ್ಮ ನಿರ್ಧಾರ. ಐದು ಗ್ರಾಮಗಳನ್ನಲ್ಲಾ ಒಂದು ಸೂಜಿಯಿಂದ ಭೂಮಿಯಲ್ಲಿ ಸಿಗುವಷ್ಟು ಕಣಗಳ ಅಂಶವೂ ಕೊಡಲಾಗದು. ದುಷ್ಟ ಚತುಷ್ಟಯರು ಕೃಷ್ಣನನ್ನು ಕಟ್ಟಿಹಾಕಲು ಯತ್ನಿಸಿದರು. ಆದರೆ ಭಗವಂತ ಎರಡನೇ ಸಲ ತನ್ನಯ ವಿಶ್ವರೂಪವನ್ನು ಪ್ರದರ್ಶನ ಮಾಡಿದ.

ಯುದ್ಧವೇ ನಿಶ್ಚಯವೆಂಬ ವಿಷಯ ಧರ್ಮನಿಗೆ ತಿಳಿಸಿ ಮುಂದೆ ಅದಕ್ಕಾಗಿ ಸೈನ್ಯಸಂಗ್ರಹ ಅಸ್ತ್ರ ಶಸ್ತ್ರ ನಿರ್ಮಾಣ ನಡೆಯಲಿ. ಇನ್ನು ಮುಂದೆ ಪಾಂಡವರನ್ನು ಉಪ ಪ್ಲಾವ್ಯಕ್ಕೆ ತೆರಳಲು ಹೇಳಿದ. (Panipat)

ಉಪಪ್ಲಾವ್ಯ (ಈಗಿನ ಪಾಣಿಪಟ್) ದೆಹಲಿಯಿಂದ 89 ಕಿ.ಮೀ. ಉತ್ತರಕ್ಕಿದೆ. ಪಾಣೀಪಟ್‌ನಿಂದ ಕುರುಕ್ಷೇತ್ರ 70 ಕಿ.ಮೀ. ದೂರವಿರುವುದು. (ಹರಿಯಾಣಾ ರಾಜ್ಯ) ಇದು ನಡೆದದ್ದು ಆಶ್ವಯುಜ ಶುದ್ಧ ಪಂಚಮಿ ಭಾರ್ಗವಾಸರದಂದು ಸೇರಿದರು. ಅಲ್ಲಿಗೆ ಮಾರ್ಗಶಿರ ಮಾಸ ಶುದ್ಧ ಪಂಚಮಿ (1 ತಿಂಗಳು) ಕುರುಕ್ಷೇತ್ರದಲ್ಲಿ ಬಿಡಾರಗಳನ್ನು ತಕ್ಕ ವ್ಯವಸ್ಥೆಯನ್ನು ಮಾಡಿಕೊಂಡರು. ಕೌರವರು ಮಾರ್ಗಶಿರ ಶುದ್ಧ ಅಷ್ಟಮಿ ದಿನ ಬಂದು ಸೇರಿದರು.

## ಕೌರವರು – ಪಾಂಡವರು ಕುರುಕ್ಷೇತ್ರ ರಣರಂಗದಲ್ಲಿ ಸೇರಿದ ಸೇನಾಗಳ ನಕ್ಷೆ




ಇಷ್ಟು ಹೇಳಿ ಕೃಷ್ಣನು ದ್ವಾರಕೆಗೆ ಪ್ರಯಾಣ ಮಾಡಿದ. ಪಾಂಡವರು ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಧರ್ಮರಾಜನೂ ಅರ್ಜುನನಿಗೆ ಹೇಳಿದ. ‘‘ನೋಡು ಪಾರ್ಥ ನಾವು ಎಷ್ಟು ಸೈನ್ಯವಿದ್ದರೂ ಶ್ರೀಕೃಷ್ಣನೊಬ್ಬನಿಲ್ಲದಿದ್ದರೆ ಹೇಗೆ. ಸ್ವಾಮಿಯ ಸಾನ್ನಿಧ್ಯ. ಉತ್ತೇಜನ ಉಪದೇಶ ಮಾರ್ಗದರ್ಶನ ಇಲ್ಲದ ಮೇಲೆ ಹೇಗೆ. ಅದಕ್ಕಾಗಿ ಹೇ ಅರ್ಜುನ ದ್ವಾರಕಾಗೆ ಹೋಗು ಭಗವಂತನನ್ನು ಸಹಾಯ ಮಾಡುವಂತೆ ಪ್ರಾರ್ಥಿಸು. ಕೃಷ್ಣನನ್ನು ಪ್ರಾರ್ಥಿಸದೇ ಹೇಗೆ ಬರುತ್ತಾನೆ. ಅದಕ್ಕಾಗಿ ಆಪತ್ಬಾಂಧವನನ್ನು ಕಂಡು ವಿಜ್ಞಾಪಿಸು ಎಂದಾಗ ಅರ್ಜುನನು ತೆರಳುತ್ತಾನೆ. ಇತ್ತ ಶಕುನಿ ದುರ್ಯೋಧನನಿಗೆ ಹೇಳುತ್ತಾನೆ. ನೋಡು ರಾಜನ್ ಕೃಷ್ಣನ ಸಹಾಯ ಈಗ ಅಗತ್ಯ. ಏಕೆಂದರೆ ಪಾಂಡವರು ಕೇಳುವುದಕ್ಕೆ ಮುಂಚೆಯೇ ನೀನು ಕೃಷ್ಣನ ಸಹಾಯ ಕೇಳು. ಇದರಿಂದಾಗಿ ಕೃಷ್ಣ ನಿರ್ವಾಹವಿಲ್ಲದೆ ಒಪ್ಪುತ್ತಾನೆ. ಆಗ ಕೃಷ್ಣರಹಿತ ಪಾಂಡವರನ್ನು ಪರಾಜಯಗೊಳಿಸಬಹುದು. ದುರ್ಯೋಧನ ಇದಕ್ಕೆ ಮೊದಲು ಒಪ್ಪಲಿಲ್ಲ. ಗೊಲ್ಲಲನ್ನು ಯಾಚಿಸಲಾಗಲೆಂದು ಹೇಳಿದನು. ಶಕುನಿಯ ಕುತಂತ್ರ ಮಾತುಗಳಿಂದ ಕೃಷ್ಣನನ್ನು ಸಂಧಿಸಲು ದ್ವಾರಕಾಗೆ ಹೊರಡುತ್ತಾನೆ.

ಕೃಷ್ಣ ಇಬ್ಬರನ್ನೂ ನೋಡಿ ಸಹಾಯ ಮಾಡಲು ಅಂಗೀಕರಿಸುತ್ತಾನೆ. ಆದರೆ ಎರಡು



ನಿಬಂಧನೆಗಳು. ಮೊದಲನೆಯದಾಗಿ ಯುದ್ಧದಲ್ಲಿ ತಾನೊಬ್ಬನೇ ಇರುವುದಾಗಿ ಆಯುಧಗಳನ್ನು ಧರಿಸುವುದಿಲ್ಲ ಹೋರಾಡುವುದಿಲ್ಲ ಮತ್ತು, ಎರಡನೆಯದಾಗಿ ನನ್ನ ಪಕ್ಷದಲ್ಲಿ ಮೂವತ್ತು ಸಾವಿರ ನಾರಾಯಣೀ ಸೇನೆ ಸುಸಜ್ಜಿತ ಮಹಾಯೋಧರು ಇರುವುದಾಗಿ ಹೇಳುತ್ತಾನೆ. ಅರ್ಜುನ ಕೃಷ್ಣನನ್ನು ಬೇಡಿಕೊಳ್ಳುತ್ತಾನೆ. ಕೃಷ್ಣ ನೀನಿದ್ದರೆ ಎಲ್ಲವೂ ಇದ್ದಂತೆ ಎಂದಾಗ ಕೃಷ್ಣ ಸರಿ ಎನ್ನುತ್ತಾನೆ. ದುರ್ಯೋಧನನು ನಾರಾಯಣ ಸೈನ್ಯವನ್ನು ಕೇಳಿ ಪಡೆಯುತ್ತಾನೆ.

ಮಾರ್ಗಶೀರ್ಷ ಶುದ್ಧ ದಶಮಿ ದಿನ ಎರಡು ಸೇನೆಗಳು ಸೇರಿತು. ಯಾರು ಯಾರು ಎಲ್ಲಿ ಹೇಗೆ ನಿಲ್ಲಬೇಕು ಎಂದು ಪ್ರಯೋಗ ನಡೆಯುತ್ತದೆ. (Full Rehearsal)

ಏಕಾದಶಿಯಂದು ಬೆಳಿಗ್ಗೆ ಮತ್ತೊಮ್ಮೆ ಪ್ರಯೋಗ ಮತ್ತು ನಿಗದಿತ ಸ್ಥಾನಗಳ ಪರಿಶೀಲನೆ ನಡೆಯುತ್ತದೆ. ಆಗ ಅರ್ಜುನನ ವಿಷಾದದೊಂದಿಗೆ ಶ್ರೀಕೃಷ್ಣನ **ಗೀತೋಪದೇಶ** ನಡೆಯುತ್ತದೆ.

**ದ್ವಾದಶಿ** ವಿರಾಮದ ದಿನ.

**ತ್ರಯೋದಶಿ** ಯುದ್ಧ ಪ್ರಾರಂಭವಾಗಿ ಎರಡನೇ ಅಮಾವಾಸ್ಯೆ ಮಧ್ಯರಾತ್ರಿ ದುರ್ಯೋಧನನ ಪತನದಿಂದ ಹದಿನೆಂಟು ದಿನಗಳ ಯುದ್ಧ ಕೊನೆಗೊಂಡಿತು.

ಹತ್ತನೆಯ ದಿನ ಭೀಷ್ಮಾಚಾರ್ಯರು ಅರ್ಜುನನ ಬಾಣದಿಂದ ತಾಡಿತರಾಗಿ ಕೆಳಗೆ ಬಿದ್ದರು. ಅವರ ಅಪೇಕ್ಷೆಯಂತೆ ಉತ್ತರಾಯಣ ಬಂದ ನಂತರ ತಾವು ದೇಹತ್ಯಾಗ ಮಾಡುವುದಾಗಿ ತಿಳಿಸಿ ಅಲ್ಲಿಯವರೆಗೆ ಶರಶಯ್ಯದ ಮೇಲೆ ಪವಡಿಸಿದರು. ಭೀಷ್ಮ ಪತನಾ ನಂತರ ಸಂಜಯನು ಧೃತರಾಷ್ಟ್ರನಿರುವಲ್ಲಿಗೆ ಬಂದು ವಿಷಯ ತಿಳಿಸುತ್ತಾನೆ.

**ಸಂಜಯೋಹಂ ಮಹಾರಾಜ ನಮಸ್ತೇ ಭರತರ್ಷಭ**
**ಹತೋ ಭೀಷ್ಮಃ ಶಾಂತನವೋ ಭರತಾನಾಂಪಿತಾಮಹಃ॥**
**ಕುಕುದಂ ಸರ್ವಯೋಧಾನಾಂ ಧಾಮ ಸರ್ವಧನುಷ್ಮತಾಂ**
**ಶರತಲ್ಪಗತಃ ಸೋಽದ್ಯ ಶೇತೇ ಕುರುಪಿತಾಮಹಃ ।**
**ಯಸ್ಯ ವೀರ್ಯಂ ಸಮಾಶ್ರಿತ್ಯ ದ್ಯೂತಂ ಪುತ್ರಸ್ತವಾಕರೋತ್ ।**
**ಸಸೇತೆ ನಿಹತೋ ರಾಜನ್ ಸಂಖ್ಯೇ ಭೀಷ್ಮಃ ಶಿಖಂಡಿನಾ॥**

(ಭೀಷ್ಮಪರ್ವ 13ನೇ ಅಧ್ಯಾಯ)

ಇದನ್ನು ಕೇಳಿದ ಧೃತರಾಷ್ಟ್ರನು ಸಂಜಯನನ್ನು ಪ್ರಶ್ನಿಸುತ್ತಾನೆ. ಇದೇ ಗೀತೆಯ ನಾಂದೀ ಆರಂಭ ಶ್ಲೋಕ. **ಧರ್ಮಕ್ಷೇತ್ರೆ ಕುರುಕ್ಷೇತ್ರೆ** ಇತ್ಯಾದಿಯಾಗಿ. ಈ ಒಂದೇ ಶ್ಲೋಕದಿಂದ **ಭಗವದ್ಗೀತೆಯೆಂಬ ಕಲ್ಪವೃಕ್ಷ ಅಮೃತವು ಹೊರಸೂಸಿತು.**

**ನಾರಾಯಣಂ ಸುರಗುರುಂ ಜಗದೇಕನಾಥಂ**
**ಭಕ್ತಪ್ರಿಯಂ ಸಕಲ ಲೋಕ ನಮಸ್ಕೃತಂ ಚ ।**
**ತ್ರೈಗುಣ್ಯ ವರ್ಜಿತಮಜಂ ವಿಭುಮಾದ್ಯಮೀಶಂ**
**ವಂದೇ ಭವಘ್ನಮಮರಾಸುರ ಸಿದ್ಧವಂದ್ಯಂ ॥**

## ಗೀತೆಯ ವೈಶಿಷ್ಟ್ಯತೆ

ಸುಮಾರು 7000 ವರ್ಷಗಳ ಹಿಂದೆ ದ್ವಾಪರಾಂತ್ಯದಲ್ಲಿ ಶ್ರೀಮನ್ನಾರಾಯಣನು ಶ್ರೀ ವ್ಯಾಸಾವತಾರವನ್ನೂ ಸ್ವೀಕರಿಸಿ ಕಾಲಗತಿಯಿಂದ ವೇದಗಳಿಗೆ ಅಪಪಾಠಗಳಿಂದ ಜ್ಞಾನವು ತಿರೋಹಿತವಾದಾಗ ವೇದವ್ಯಾಸ ದೇವರು ವೇದ ವಿಭಾಗ ಮಾಡಿದರು. ಆದರೂ ವೇದಗಳ ಯತಾರ್ಥ ಜ್ಞಾನವಾಗದೇ ಅದೋವ ಇದೋವ ಎಂಬ ಸಂಶಯಗಳಿಗೆ ಒಳಗಾದಾಗ ತಾವೇ ವೇದಾರ್ಥ ನಿರ್ಣಾಯತವಾದ ಮೀಮಾಂಸ (ಬ್ರಹ್ಮಸೂತ್ರಗಳನ್ನು) ಶಾಸ್ತ್ರವನ್ನು ರಚನೆ ಮಾಡಿದರು.

**(ಸತ್ಯವತ್ಯಾಂ ಪರಾಶರಾತ್ ಅವತೀರ್ಣೋ ವ್ಯಾಸನಾಮಾ ಮುರಮಥನः। ಸಮುದ್ಧೃತಸಮುತ್ಪನ್ನ ನಿಗಮಕಲ್ಪತರುರಲ್ಪಮತಿಮನುಜದಯಾಲು ಶಾಖೋಪಶಾಖಾಭೇದೇನ ವಿಭಕ್ತವೇದಪ್ರದರ್ಥನಿರ್ಣಿನೀಷುವಿರಚಿತ ಬ್ರಹ್ಮಸೂತ್ರಸ್ತದನಧಿಕಾರಿಜನಾಪವರ್ಗಾಯ ಪ್ರಕಾಶಿತಂಮಹಾಭಾರತಂ।)**

**"ತ್ರೈವರ್ಣಿಕಾನಾಂ ವೇದೋಕ್ತೇ ಸಮ್ಯಕ್‌ಭಕ್ತಿಮತಾಂಹಕಾ ಅಧಿಕಾರಃ"** ವರ್ಣತ್ರಯದವರಿಗೇನೇ ವೇದ ವೇದಾಂತ ಅಧ್ಯಯನದಿಂದ ತತ್ವಜ್ಞಾನವನ್ನು ಪಡಿಯಲು ಅಧಿಕಾರಗಳೆಂದಾಯಿತು. ಆದರೆ ಸ್ತ್ರೀ ಶೂದ್ರಾದಿಗಳಿಗೆ ಅಧಿಕಾರ ಇಲ್ಲವೆಂದು ಅವರಲ್ಲಿಯೂ ಸಜ್ಜನರೂ ತತ್ವಜ್ಞಾನಕ್ಕೆ ಅರ್ಹರಾಗಿದ್ದಾರೆಂದು ಮನಗಂಡು ಆ ವರ್ಗದವರೂ ಸಹ ಸದ್ಗತಿ ಹೊಂದಲೆಂಬ ಮಹತ್ವಾಕಾಂಕ್ಷೆಯಿಂದ ಪರಮ ಕರುಣಾಳುಗಳಾದ ಶ್ರೀ ವೇದವ್ಯಾಸದೇವರು ಪಂಚಮವೇದವೆಂದು ಪ್ರಸಿದ್ಧವಾದ ಸಕಲ ವೇದಾರ್ಥ ಸಾರಭೂತವಾದ ಶ್ರೀಮನ್ಮಹಾಭಾರತವನ್ನು ರಚಿಸಿದರು. ಮಹಾಭಾರತ ಪಠಣಾದಿಗಳಿಂದ ತತ್ವಜ್ಞಾನ ಪ್ರಾಪ್ತವಾಗಿ ಶ್ರೇಯಸ್ಸಿಗೆ ಕಾರಣವಾಗಲೆಂದು ತಿಳಿಸಿರುತ್ತಾರೆ. ಇಂತಹ ಮಹಾಭಾರತದಲ್ಲಿ ಶ್ರೀಮದ್ಭಗವದ್ಗೀತಾ ಪರಮಾತ್ಮನ ಯಥಾರ್ಥ ಜ್ಞಾನಕ್ಕೆ ಸಾಧನೀಭೂತವಾಗಿದೆ. ಸರ್ವಶಾಸ್ತ್ರ ಸಾರಭೂತವಾದದ್ದು ಮಹಾಭಾರತವು. ಅದರಲ್ಲಿ ಭಗವದ್ಗೀತೆಯು ಮಧುರೂಪವಾದದ್ದೆಂದೂ ತಿಳಿಯಬಯಸಿದರು.

**(ತತ್ರ ಚ ಸರ್ವಭಾರತಾರ್ಥಸಂಗ್ರಹಾಂ ವಾಸುದೇವಾರ್ಜುನ ಸಂವಾದರೂಪಾಂ ಭಾರತ ಪಾರಿಜಾತ ಮಧುಭೋತಾಂ ಗೀತಾಮುಪನಿಬಬಂಧ** – ಗೀತಾಭಾಷ್ಯ)



**ಸರ್ವಜ್ಞಾನಪ್ಲವೇನೈವ ವೃಜಿನಂ ಸಂತರಿಷ್ಯಸಿ । ನಹಿ ಜ್ಞಾನೇನ ಸದೃಶಂ ಪವಿತ್ರ ಮಿಹವಿದ್ಯತೆ ॥**, ಇತ್ಯಾದಿ ಗೀತಾವಚನಾನುಸಾರ ಸತ್ಕರ್ಮ, ಬಂಧನಿವೃತ್ತಿದ್ವಾರಾ ಜ್ಞಾನಾನಂದರೂಪ ಪರಮ ಪುರುಷಾರ್ಥಕ್ಕೆ ನಿಷ್ಕಾಮಕರ್ಮ, ಧ್ಯಾನವೆಂಬೆರಡು ಉಪಾಯದಿಂದ ಭಗವದ ಪರೋಕ್ಷಜ್ಞಾನ ಕೈಸಾಧಕಗಳು. ಇವುಗಳಲ್ಲಿ ಕರ್ಮಯೋಗವು ವಿಶದವಾಗಿ ಐದು ಅಧ್ಯಾಯಗಳಲ್ಲಿ ಪ್ರತಿಪಾದಿಸಲ್ಪಟ್ಟು, ಆರನೇ ಅಧ್ಯಾಯದಲ್ಲಿ ಧ್ಯಾನಯೋಗವು ನಿರೂಪಿಸಲ್ಪಟ್ಟಿದೆ. ಇದಕ್ಕೆ ಪ್ರಥಮ ಷಟ್ಕವೆಂದು ಕರೆದಿರುತ್ತಾರೆ.

ಎರಡನೇ ಷಟ್ಕದಲ್ಲಿ ಜ್ಞಾನೋಪಾಯವಾದ ಕರ್ಮಯೋಗ ಮತ್ತು ಧ್ಯಾನಯೋಗಗಳು ಭಗವಂತನಲ್ಲಿ ಭಕ್ತಿಸಹಿತವಾಗಿಯೇ ಆಚರಿಸಲ್ಪಡಬೇಕು.

**(ಮಹಾತ್ಮ್ಯಜ್ಞಾನ ಪೂರ್ವಸ್ತು ಸುಧೃಢಃ ಸರ್ವತೋಧಿಕः। ಸ್ನೆಹೋಭಕ್ತಿರಿತಿ ಪ್ರೊಕ್ತಸ್ತಯಾ ಮುಕ್ತಿರ್ನಚಾನ್ಯಥಾ॥)**

ಭಕ್ತಿ ಎಂಬುದು ಅಧಿಕಾರಿಗಳಿಗೆ ಅತ್ಯಾವಶ್ಯಕವು. ಇಂತಹ ಭಕ್ತಿ, ಪ್ರೇಮ ಶ್ರೀಹರಿಯಲ್ಲಿ ಉಂಟಾಗಬೇಕಾದರೆ ಅವನ ಮಹಾತ್ಮ ಜ್ಞಾನವು ಅತಿ ಅವಶ್ಯಕವು. ಭಕ್ತ್ಯರ್ಥವಾಗಿ ಭಗವನ್ಮಹಿಮೆಯನ್ನು ಈ ಷಟ್ಕದಲ್ಲಿ ತಿಳಿಸಲಾಗಿದೆ.

ತೃತೀಯ ಷಟ್ಕದಲ್ಲಿ ಹಿಂದೆ ತಿಳಿಸಿದ ಎರಡು ಷಟ್ಕಗಳ ವಿಷಯವನ್ನು ಇನ್ನಷ್ಟು ಸ್ಪಷ್ಟವಾಗಿ ವಿವರಿಸಲ್ಪಟ್ಟಿದೆ.

**ತತ್ರ (ಭಗವದ್ಗೀತೆ) ಪೂರ್ವಷಟ್ಕ ಜ್ಞಾನೋಪಾಯೋಕ್ತಿಃ ದ್ವಿತೀಯ ಷಟ್ಕ ಸಾಧನೋಕ್ತಿಃ ತೃತೀಯ ಷಟ್ಕ ಪ್ರಾಗುಕ್ತಸ್ಯ ಪ್ರಪಂಚನಂ (ವಿವೃತ್ತಿಃ)**

ಹದಿನೆಂಟು ದಿನ ಯುದ್ಧದಲ್ಲಿ ಭೀಷ್ಮರು ಹತ್ತು ದಿನಗಳ ಪರ್ಯಂತ ಸೇನಾಧಿಪತಿಗಳಾಗಿದ್ದರು. ನಂತರ ಶರಶಯ್ಯ. ದ್ರೋಣಾಚಾರ್ಯರು ನಾಲ್ಕು ದಿನಗಳು. ಕರ್ಣ ಎರಡು ದಿನಗಳು. ಶಲ್ಯ ಒಂದುವರೆ ದಿನ. ಉಳಿದ ಅರ್ಧ ದಿನ ದುರ್ಯೋಧನ.

ಭಗವದ್ಗೀತೆಯನ್ನು (ಉಪದೇಶವನ್ನು) ಮಾರ್ಗಶೀರ್ಷ ಶುದ್ಧ ಏಕಾದಶಿಯಂದು ಶ್ರೀ ಕೃಷ್ಣನು ಅರ್ಜುನನಿಗೆ ಉಪದೇಶಿಸಿದನು. ಯುದ್ಧರಂಗದಲ್ಲಿ ಕೌರವರದ್ದು ಹನ್ನೊಂದು ಅಕ್ಷೋಹಿಣಿ ಪಾಂಡವರದ್ದು ಏಳು ಅಕ್ಷೋಹಿಣಿ ಸೈನ್ಯ (ಒಂದು ಅಕ್ಷೋಹಿಣಿ ಸೈನ್ಯ ಎಂದರೆ 65610 ಕುದುರೆಗಳು, ಒಂದೊಂದು ಕುದುರೆಗೆ ಒಬ್ಬ ಯೋಧ ಒಬ್ಬ ಪರಿಚಾರಕ ಒಟ್ಟು ಇಬ್ಬರು, 21780 ಗಜಗಳು ಒಂದೊಂದು ಗಜಕ್ಕೆ ಒಬ್ಬ ಯೋಧ, ಒಬ್ಬ ಮಹಾನತ, ಒಬ್ಬ ಪರಿಚಾರಕ ಒಟ್ಟು ಮೂರು ಮಂದಿ, 21780 ರಥಗಳು ಒಂದೊಂದು ರಥಕ್ಕೆ ಒಬ್ಬ ಸಾರಥಿ, ಒಬ್ಬ ಯೋಧ, ಒಬ್ಬ ರಾಕ್ಷಸ ಒಟ್ಟು ಮೂರು ಮಂದಿ, 1,09,250 ಪದಾತಿಗಳು ಅಂತಹವು 18 ಅಕ್ಷೋಹಿಣಿ ಇವರಿಗೆ ನಾವೀಕರು–Batmen, ಪಾಕ ಪುರುಷರು, ಸೇವಕರು

ಇತ್ಯಾದಿಯಾಗಿ ಕುರುಕ್ಷೇತ್ರ ರಣರಂಗದಲ್ಲಿ 65 ಲಕ್ಷ ಜನಸ್ತೋಮ ಇದ್ದಿರಬೇಕು. ಇಷ್ಟು ದೊಡ್ಡ ಗಾತ್ರದ ಸೇನಾ ಸಮೂಹ ಇತಿಹಾಸದಲ್ಲೇ ಅತಿ ವಿರಳ. ಅಲ್ಲದೇ ಕುರುಪಾಂಡವರ ಬಂಧು ವರ್ಗದವರೇ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಇದ್ದರೆಂಬುದು ಇಲ್ಲಿನ ವಿಶೇಷ. ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಬಂಧುಬಾಂಧವರು ಸೇರಿ ಪರಸ್ಪರ ಹೋರಾಡಿ ಮಡಿದದ್ದು ಇಡೀ ಜಗತ್ತಿನ ಯುದ್ಧಗಳ ಚರಿತ್ರೆಯಲ್ಲಿ ಕಂಡುಬರುವುದಿಲ್ಲ) ಸೇರಿದ್ದಿತು. ತ್ರಯೋದಶಿಯಂದು ಯುದ್ಧವು ಪ್ರಾರಂಭವಾಯಿತು. ಭೀಷ್ಮರು ಹತ್ತು ದಿನಗಳು ಹೋರಾಡಿ ಅರ್ಜುನನ ಬಾಣದಿಂದ ತಾಡಿತರಾಗಿ ಶರಶಯ್ಯ ಹೊಂದಿದರು. ಅಂದು ಅಷ್ಟಮಿ. ಆಗ ಸಂಜಯನು ರಣರಂಗದಿಂದ ಧೃತರಾಷ್ಟ್ರನಿರುವ ಬಿಡಾರಕ್ಕೆ ಬಂದು ಭೀಷ್ಮ ಪತನ ವೃತ್ತಾಂತವನ್ನು ತಿಳಿಸಿದನು. ಧೃತರಾಷ್ಟ್ರನು ಅದನ್ನು ಕೇಳಿದವನೇ ಸಂಜಯನನ್ನು ಯುದ್ಧ ಆರಂಭದಿಂದ ನಡೆದ ಎಲ್ಲ ವಿಷಯವನ್ನು ಹೇಳೆಂದು ಕೇಳಿದ ಪ್ರಶ್ನೆಯೇ ಗೀತೆಗೆ ನಾಂದಿ ಎಂದು ತಿಳಿಯಬಹುದು. (ಶ್ರೀ ವೇದವ್ಯಾಸದೇವರು ಧೃತರಾಷ್ಟ್ರನಿಗೆ ಯುದ್ಧವನ್ನು ನೋಡಲಿಚ್ಛಿಸುವುದಾದರೆ ದೃಷ್ಟಿಯನ್ನು ಕೊಡುವುದಾಗಿ ಹೇಳಿದರು. ಆದರೆ ಧೃತರಾಷ್ಟ್ರನಿಗೆ ತನ್ನ ಬಂಧು ನಾಶ ರೂಪವಾದ ಯುದ್ಧವನ್ನು ನೋಡಲು ಅಪೇಕ್ಷೆ ಪಡದೇ ಇದ್ದಾಗ ಅವನ ಸಾರಥಿ ಭಗವದ್ಭಕ್ತನಾದ ಸಂಜಯನಿಗೆ ದಿವ್ಯದೃಷ್ಟಿ ಕೊಟ್ಟು ರಾಜನಿಗೆ ಎಲ್ಲ ವಿವರಗಳನ್ನು ನೋಡಿ ಕೇಳಿ ಹೇಳುವ ಸಾಮರ್ಥ್ಯವನ್ನು ದಯಪಾಲಿಸಿದರು.)

ಸ್ವಯಂ ಶ್ರೀಹರಿಯ (ಪದ್ಮನಾಭನ) ಮುಖದಿಂದ ನಿಶ್ರುತವಾದ ಗೀತಾಮೃತವು ಪರಮ ಪ್ರಮಾಣವೆನಿಸಿದೆ. ಇದರಲ್ಲಿ ಹರಿಸರ್ವೋತ್ತಮತ್ವ, ಜಗತ್ಸತ್ಯತ್ವ ಜೀವರ ನಿತ್ಯತ್ವ ಅವರ ಅಸ್ವಾತಂತ್ರ್ಯ, ಶ್ರೀಹರಿಯ ನಿಯಾಮಕತ್ವ, ಇತ್ಯಾದಿ ಅನೇಕಾನೇಕ ಪ್ರಮೇಯಗಳನ್ನು ನಿರೂಪಿಸಲಾಗಿದೆ. ಈ ಗೀತೆಗೆ ಶ್ರೀಮದಾಚಾರ್ಯರು ಎರಡು ರೀತಿ ನಿರ್ಣಾಯಕ ವ್ಯಾಖ್ಯ ರಚಿಸಿರುವರು. ಮೊದಲನೆಯದು **ಗೀತಾಭಾಷ್ಯ.** (ಶ್ರೀಮದಾಚಾರ್ಯರು ಬರೆದ ಮೊದಲನೆಯ ಭಾಷ್ಯ. ನಂತರ **ಬ್ರಹ್ಮಸೂತ್ರಗಳಿಗೆ ಭಾಷ್ಯ**ವನ್ನು ರಚಿಸಿದರು.) ಎರಡನೆಯದು **ಗೀತಾತಾತ್ಪರ್ಯ.** ಶ್ರೀಮಜ್ಜಯತೀರ್ಥರು **ಪ್ರಮೇಯ ದೀಪಿಕಾ** ಎಂಬ ಟೀಕೆ, ಮಂತ್ರಾಲಯ ಪ್ರಭುಗಳು ತಮ್ಮ **ಗೀತಾ ವುವೃತ್ತಿ** ರೂಪವಾದ ಟಿಪ್ಪಣಿ ಬರೆದು ಸಜ್ಜನರಿಗೆ ಮಹದನುಗ್ರಹ ಮಾಡಿರುತ್ತರೆ. ಈ ಶತಮಾನದ ಯುಗಪುರುಷರು ಯೋಗಿಗಳು ಪ್ರಾತಃಸ್ಮರಣೀಯರಾದ ಶ್ರೀಶ್ರೀ **108 ಶ್ರೀಮತ್ಸತ್ಯಧ್ಯಾನತೀರ್ಥ** ಶ್ರೀಪಾದಂಗಳವರ **ಗೀತಾಪ್ರತಿಪದಾರ್ಥ ಚಂದ್ರಿಕಾ ಸಭಾ ಸಾರಸಂಗ್ರಹ**ಗಳು ಪಾಮರರಿಗೂ ಗೀತೆಯ ತತ್ವವನ್ನು ತಿಳಿಯಹೇಳುವಂತೆ ರಚಿಸಿ ಉದ್ಧಾರ ಮಾಡಿದ್ದಾರೆ. ಇಂತಹ ಪ್ರಮೇಯ ಪುಂಜಗಳಿಂದ ಕೂಡಿದ ಶ್ರೀ ಗೀತೆಯ ಸಾರವನ್ನು ತಿಳಿಗನ್ನಡದಲ್ಲಿ ಬರೆದು ಅಧ್ಯಯನ ಪಠನ ಮಾಡಲೋಸುಗ ನಮ್ಮ ಪೂಜ್ಯ ತೀ॥ ತಂದೆಯವರು ಶ್ರೀ ಗೀತಾಮೃತಂವನ್ನು ಪ್ರಕಟಿಸಿದರು. ಈಗ ಅದೇ ಕೃತಿಗೆ ಇನ್ನಷ್ಟು ಪೋಷಕವಾಗುವಂತೆ ಪ್ರತಿ ಅಧ್ಯಾಯದಲ್ಲೂ



ಕೆಲ ಉಪಯುಕ್ತ ಶ್ಲೋಕಗಳನ್ನು ಸೇರಿಸಲಾಗಿದೆ. ಇದರಿಂದ ನನ್ನ ಪೂಜ್ಯಶ್ರೀ ಆಚಾರ್ಯರ ಅಂತರ್ಯಾಮಿ ಶ್ರೀಹರಿ ಪ್ರೀತನಾಗಿ ಮತ್ತು ಸಜ್ಜನರು ಸ್ವೀಕರಿಸಿದರೆ ನನ್ನ ಶ್ರಮ ಸಾರ್ಥಕವಾಗುವುದೆಂದು ನನ್ನ ನಂಬಿಕೆ.

**ವಿಶ್ವಸ್ಥಿತಿಪ್ರಲಯ ಸ್ವರ್ಗ ಮಹಾವಿಭೂತಿ**
**ವೃತ್ತಿಪ್ರಕಾಶಿ ನಿಯಮಾವೃತ ಬಂಧಮೋಕ್ಷಃ ।**
**ಯಸ್ಯಾಅಪಾಂಗಲವ ಮಾತ್ರತ ಊರ್ಜಿತಾ ಸಾ**
**ಶ್ರೀರ್ಯತ್ಕಟಾಕ್ಷ ಬಲವತ್ಯಜಿತಂ ನಮಾಮಿ॥**

ಸಂಗ್ರಹ / ನಿರೂಪಣೆ
ಇತಿ ಬುಧಜನ ಚರಣದಾಸ

**30-03-2006** **ಬದರೀನಾಥಾಚಾರ್ಯ ಘೂಳಿ**

ಹರಿಃ ಓಂ

## ಭಗವದ್ಗೀತೆಯ ಪ್ರಾರಂಭ ಶ್ಲೋಕ – ಒಂದು ನೋಟ

ಧೃತರಾಷ್ಟ್ರ ಉವಾಚ: ಧರ್ಮಕ್ಷೇತ್ರೇ ಕುರುಕ್ಷೇತ್ರೇ ಸಮವೇತಾ ಯುತ್ಸವಃ ।

"ಮಾಮಕಾಃಪಾಂಡವಾಶ್ಚೈವ ಕುಮಕುರ್ವತ" ಯುದ್ಧ ಮಾಡಲು ಸನ್ನಧರಾದ ನನ್ನ ಮಕ್ಕಳೇ ಆದಿ ಆಗಿ ಮತ್ತು ಪಾಂಡವರು ಏನು ಮಾಡಿದರು ತಿಳಿಸು.

ಇಲ್ಲಿ ಧೃತರಾಷ್ಟ್ರನ ಪ್ರಶ್ನೆಯಲ್ಲಿ ಎಷ್ಟೊಂದು ಅರ್ಥ ಅಡಗೆದೆ ಎಂಬುದನ್ನು ಗಮನಿಸಬೇಕು.

(1) **ಧರ್ಮ** ಕ್ಷೇತ್ರವೆಂದೆನಿಸಿದ ಕುರುಕ್ಷೇತ್ರ – ಧರ್ಮಕ್ಷೇತ್ರೇ, ಕುರುಕ್ಷೇತ್ರೇ } ಕ್ಷೇತ್ರೇ Common

ಕ್ಷೇತ್ರ ಕ್ಷೇತ್ರ ಎಂದು ಎರಡು ಸಲ ಪ್ರಯೋಗವಿದೆ. ಆಗ ಸರಿಯಾಗಿ ಅನ್ವಯ ಮಾಡಿದರೆ – ಕ್ಷೇತ್ರವೆಂದೆನಿಸಿದ ಸ್ಥಳದಲ್ಲಿ ಧರ್ಮವನ್ನಷ್ಟೇ ಮಾಡಬೇಕು. ಧರ್ಮಸಮ್ಮತವಾದ ಕಾರ್ಯವನ್ನು ಮಾಡುವುದನ್ನು ಬಿಟ್ಟು ಮಾಮಕಾಃ ನನ್ನವರಾದ ದುರ್ಯೋಧನಾಧಿಗಳು ಮತ್ತು ಪಾಂಡವರು ಏನು ಮಾಡಿದರು. ಈ ಒಂದು ವಾಕ್ಯದಲ್ಲಿ ಧೃತರಾಷ್ಟ್ರನ ಜ್ಞಾನಹೀನತ್ವವನ್ನು ತೋರಿಸುತ್ತದೆ.

(2) **ಮಾಮಕಾಃ** – ನನ್ನವರಾದ ದುರ್ಯೋಧನಾದಿಗಳು ದುಷ್ಟರೇ ಅಧರ್ಮಿಗಳೇ ಇರಬಹುದು. ರಾಜ್ಯಕಾಮುಕಾರಾಗಿ ಯುದ್ಧ ಸನ್ನದ್ಧರಗಿದ್ದಾರೆ. ಆದರೆ ಪಾಂಡವರು ಧರ್ಮಿಷ್ಟರು. ಎಂದೆಂದೂ ಅಧರ್ಮಕಾರ್ಯ ಮಾಡಿದವರೇ ಅಲ್ಲ ಮತ್ತು ಜ್ಞಾನಿಗಳೂ, ಅಂಥವರು ಧರ್ಮಕ್ಷೇತ್ರದಲ್ಲಿ ಮಾಡಬಾರದ್ದನ್ನು ಏನು, ಏಕೆ ಮಾಡಿದರು ? **ಕಿಮ್‌ಅಕುರ್ವತ** ಎಂದು ಪದಚ್ಛೇದ ಮಾಡಿದಾಗ ಈ ವಿಷಯ ತಿಳಿದು ಬರುತ್ತೆ. ರಣರಂಗದಲ್ಲಿ ಯುದ್ಧ ಮಾಡಬೇಕೆಂದು ಸಿದ್ಧರಾಗಿ ಶಸ್ತ್ರಪಾಣಿಗಳಾಗಿ ಬಂದವರನ್ನು ಏನು ಮಾಡಿದರು ? ಎಂಬ ಪ್ರಶ್ನೆ ನಿರರ್ಥಕ. ಏಕೆಂದರೆ ಇಲ್ಲಿ ಮಿಳಿತರಾದವರು ಯೋಧರು. ಒಂದು ಸಮಾರಂಭಕ್ಕಾಗಿ ಅಥವಾ ಸಾಮೂಹಿಕ ಭೋಜನಕ್ಕೆ ಸೇರಿರುವುದಿಲ್ಲವೆಂಬುದು ಸ್ಪಷ್ಟ.

**ಇನ್ನು ಮಾಮಕಾಃ** ಎಂದು ಧೃತರಾಷ್ಟ್ರನು ಮೊದಲು ಹೇಳಿ ನಂತರ **ಪಾಂಡವಾಃ** ಎಂದಿದ್ದಾನೆ. ದುರ್ಯೋಧನ ಅಧರ್ಮಿ. ಯುದ್ಧ ಪಿಪಾಸು ಅಂತ ಗೊತ್ತಿದ್ದೂ ಸಹ ಪುತ್ರವಾತ್ಸಲ್ಯದಿಂದ ಅಭಿಮಾನ ಬಿಡದೇ ನನ್ನವರೂ ಎಂದೂ, ಪಾಂಡವರು ಯಾರೂ ಅಲ್ಪ ತನ್ನ ಸೂದರರ ಮಕ್ಕಳೇ ಆದರೂ ಅವರನ್ನು ಬಂಧುಗಳೆಂದು ಹೇಳದೇ ಪಾಂಡವಾಃ ಎಂದಾಗ ಅವರು ನನಗೆ ಸಂಬಂಧ ಇಲ್ಲ. ಬೇರೆಯುವರೂ ಎಂಬ ಅರ್ಥವನ್ನು ಸೂಚಿಸುತ್ತಾನೆ. ವಿದುರ ಹಿಂದೆ ಹೇಳಿದ್ದ. ಒಬ್ಬ ದುಷ್ಟನಿಂದ ಸರ್ವನಾಶ. ಆದ್ದರಿಂದ



ಅವನನ್ನು ಪರಿತ್ಯಾಗ ಮಾಡು ಅಂತ. ಆದರೆ ಪಾಂಡವರಲ್ಲಿ ದ್ವೇಷ ಮಾಡುವವರಿಗೆ ಕುಮ್ಮಕ್ಕು ಕೊಟ್ಟ ಪಾಂಡವರ ದ್ವೇಷ ಎಂದರೆ ಶ್ರೀ ಕೃಷ್ಣನಲ್ಲಿ ದ್ವೇಷ ಎಂದಾಯಿತು. ವಿದುರನ ಮಾತಿಗೆ "ಏನು ಮಾಡಲಿ ವಿದುರ. ನನ್ನ ಪುತ್ರ, ಅವನ ಮಾಮ(ಶಕುನಿ)ಕಾ ಮಾತಿಗೆ ಶಕುನಿಯ ಉಪದೇಶದಲ್ಲೆ ಸಂತೋಷಪಟ್ಟ. ಆದ್ದರಿಂದ ನನ್ನ ಮಾತು ಹಿಡಿಸಲಿಲ್ಲ. ಮಾಮಕಾಃ ಎಂಬ ಪದವನ್ನು ಸಂಧಿ ಬಿಡಿಸಿದರೆ ಮಾ **ಅಮಕಾಃ** ಎಂದಾಗ ದುರ್ಯೋಧನಾದಿಗಳು **ಅಪಕ್ವರು** ಅಂದರೆ ಪರಿಪಕ್ವ ಜ್ಞಾನರಹಿತರೆಂದು ಅರ್ಥವಾಗುತ್ತೆ. ಇಲ್ಲಿ ಸರಿಯಾಗಿ ಹೊಂದುತ್ತದೆ. ಏಕೆಂದರೆ ಇದರಲ್ಲಿ ವಿಶಿಷ್ಟ ಅಂತರಾರ್ಥವು ತಿಳಿದುಬರುತ್ತೆ. ಗಾಂಧಾರಿ ಗರ್ಭಿಣಿ ಆಗಿದ್ದಳು. ಅದೇ ರೀತಿ ಕುಂತಿಯು ಆ ಹೊತ್ತಿಗೆ ಧರ್ಮರಾಜನನ್ನು ಮಗನನ್ನಾಗಿ ಪಡೆದಿದ್ದಳು. ಈ ಸುದ್ದಿ ಕೇಳಿ ಗಾಂಧಾರಿ ಶೋಕಪಟ್ಟಳು. ನಂತರ ಮಾತ್ಸರ್ಯದಿಂದ ತನ್ನ ಗರ್ಭವನ್ನು ಬಲಾತ್ಕಾರದಿಂದ ಗುದ್ದಿ ನೂರು ಮೃತ ಪಿಂಡಗಳನ್ನು ಪಡೆದಳು. ಶ್ರೀ ವೇದವ್ಯಾಸ ದೇವರು ಗಾಂಧಾರಿಯ ಶೋಕವನ್ನು ಸಮಾಧಾನಪಡಿಸಿ ಆ ನೂರು ಪಿಂಡಗಳನ್ನು ನೂರು ತುಪ್ಪದ ಗಡಿಗೆಗಳಲ್ಲಿರಿಸಿದರು. ಕಾಲಾನಂತರ ಆ ಕುಂಭಗಳಿಂದ ನೂರು ಪುತ್ರರು ಹೊರಬಂದರು. ಇಲ್ಲಿ ವಿಷಯವೇನೆಂದರೆ ಗಾಂಧಾರಿಯ ಗರ್ಭದಿಂದ ಅಪಕ್ವ ಶಿಷುಗಳನ್ನು ತೆಗೆದ ಕಾರಣ **ಅ ಮಮಕಾಃ** ಎಂಬುದು ಕೂಡುತ್ತದೆ. ಇನ್ನೊಂದು ಅಂಶ ಸ್ಫುಟವಾಗುತ್ತದೆ. ಧರ್ಮಕ್ಷೇತ್ರೆ ಎಂದಾಗ ಧರ್ಮಂಚ ಕ್ಷೇತ್ರಂಚ ಎಂದು ವಿಗ್ರಹಾನುಸಾರಿ ನನ್ನವರಾದ ದುರ್ಯೋಧನಾದಿಗಳು ಭಗವಂತನ ಪ್ರೀತಿಗಳಿಸುವಂಥ  ಕಾರ್ಯವನ್ನೇ ಆಗಲಿ, ತದ್ವಿಷಯಕ ಜ್ಞಾನವನ್ನೂ ಪಡೆಯಲಿಲ್ಲವೆಂದು ಧೃತರಾಷ್ಟ್ರನು ಶೋಕಿಸಿದನೆಂದು ಅರ್ಥೈಸಲು ಬರುವುದು. "ವೇದಪ್ರಣೀತೋ ಧರ್ಮಃ ತದ್ವಿಪರೀತೆ ಅಧರ್ಮಃ" ಆದ್ದರಿಂದ **ಮಾಮಕಾಃ** ಎಂದು ಹೇಳಿದರು.

(3) ಕ್ಷೇತ್ರ ಎಂದರೆ ಏನು? ಇದಕ್ಕೆ ಶ್ರೀಕೃಷ್ಣ ಪರಮಾತ್ಮ ಭಗವದ್ಗೀತೆ ಹದಿಮೂರನೇ ಅಧ್ಯಾಯದಲ್ಲಿ ಅರ್ಜುನನ ಪ್ರಶ್ನೆ ರೂಪವಾದ "ಕ್ಷೇತ್ರಂ ಕ್ಷೇತ್ರಂಜ್ಞ ಮೇವ ಚ" ಎಂಬುದಕ್ಕೆ ಪರಮಾತ್ಮ ಉತ್ತರ ಕೊಡುತ್ತಾ **"ಇದಂ ಶರೀರಂ ಕೌಂತೀಯು ಕ್ಷೆತ್ಯಮಿತ್ಯಭಿದೀಯತೆ"** ಎಂದಾಗ ನಮ್ಮ ಮಾನವ ಶರೀರ ಕ್ಷೇತ್ರವೆಂದಾಯಿತು. ಕಾರಣ ಎರಡು ಅರ್ಥ ಹೊಂದುತ್ತದೆ. (ಅ) **"ಸ್ಥೀಯುತೇತ್ರ ಭಾಗವತೇತಿ ಕ್ಷೇತ್ರಂ"** ಭಗವಂತನ ಆವಾಸ ಸ್ಥಾನವಾದ್ದರಿಂದ ಕ್ಷೇತ್ರ ಎಂದು ತಿಳಿದುಬರುತ್ತದೆ. (ಆ) ಕ್ಷೇತ್ರ ಎಂದರೆ ಈ ಶರೀರದಲ್ಲಿ 24 ತತ್ವಾಭಿಮಾನಿ ದೇವತೆಗಳು ಇದ್ದುಕೊಂಡು ಶರೀರಸ್ಥ ಇಂದ್ರಿಯಗಳನ್ನೂ ನಿಯಮನ ಮಾಡುತ್ತಾರೆ. ಆಗ ಇಂದ್ರಯಾಭಿಮಾನಿ ದೇವತೆಗಳ ನಿವಾಸ ಸ್ಥಾನವಾಗುವುದು.

(4) ಇದಕ್ಕೆ ಇನ್ನೊಂದು ಗುಡಾರ್ಥವೂ ಸೂಚಕವಾಗುತ್ತದೆ. ಇಂತಹ ಉತ್ತಮವಾದ ಸರ್ವದೇವತೆಗಳಿಂದಲೂ ಮತ್ತು ಸರ್ವೇಶ್ವರನಿಂದಲೂ ನಿಯಮಿತವಾದ ದೇಹವು ಕ್ಷೇತ್ರವೆನಿಸುವುದು. ಯಾವುದೇ ಯೋನಿಯಲ್ಲಿ ಜನಿಸಲಿ ಅವನಿಗೆ ಇದರ ಬಗ್ಗೆ ತಿಳುವಳಿಕೆ ಇರಬೇಕು. ಇಲ್ಲವಾದರೆ ಆರ್ಯೋಕ್ತಿಯಂತೆ **"ಅನ್ಯ ಕ್ಷೇತ್ರೇ ಕೃತಂ ಪಾಪಂ ಪುಣ್ಯಕ್ಷೇತ್ರೇ**

**ವಿನಶ್ಯತಿ – ಪುಣ್ಯಕ್ಷೇತ್ರೇ ಕೃತಂ ಪಾಪಂ ವಜ್ರಲೇಪೋ ಭವಿಷ್ಯತಿ''** ಇದರ ಅರ್ಥ ಹೀಗೆ ತಿಳಿಯಬಹುದು. ಅನ್ಯಕ್ಷೇತ್ರೇ ಎಂದಾಗ ಶೂದ್ರಾದಿ ಜನ್ಮ ಬಂದರೂ ಸಹ ಪುಣ್ಯ ಧರ್ಮಕಾರ್ಯ ಮಾಡಬೇಕು. ತತ್ಪರಿಣಾಮವಾಗಿ ಬ್ರಾಹ್ಮಣಾದಿ ಜನ್ಮವೆಂಬ ಪುಣ್ಯಕ್ಷೇತ್ರವು ಲಭಿಸುವುದು. ಬ್ರಾಹ್ಮಣನಾಗಿ ಶರೀರ ಧರಿಸಿದಾಗಲೂ ಸ್ವವಿಹಿತ ಕರ್ಮಾದಿಗಳನ್ನು ಮಾಡದೇ ಪಾಪಕರ್ಮ ಮಾಡಿದರೆ ಅದು ಅನರ್ಥಕ್ಕೆ ಕಾರಣವಾಗಿ ವಜ್ರಲೇಪದಂತೆ ಜನ್ಮಜನ್ಮಾಂತರದಲ್ಲಿಯೂ ಕಾಡುವುದು. ಆದ್ದರಿಂದ ಅನ್ಯಕ್ಷೇತ್ರವೆಂದಾಗ ಕೀಳು ಯೋನಿಯಲ್ಲಿ ತಿಳಿಯದೇ ಮಾಡಿದ ಪಾಪಗಳು ಪುಣ್ಯಕ್ಷೇತ್ರವೆನಿಸಿದ ವಿಪ್ರಜನ್ಮ ಬಂದಾಗ ವಿಹಿತ ಕರ್ಮಾನುಷ್ಠಾನದಿಂದ ನಿವೃತ್ತಿ ಆಗುವುದೆಂದೂ ಭಾವ. ಆದರೆ ಪುಣ್ಯಕ್ಷೇತ್ರವೆಂದೆನಿಸಿದ ದ್ವಿಜನಾಗಿ ಹುಟ್ಟಿದಾಗ ಪಾಪಕೃತ್ಯಗಳು ವಜ್ರಲೇಪದಂತೆ ಸತತವಾಗಿ ಕಾಡುವುದು.

ತಾತ್ಪರ್ಯವಿಷ್ಟು : ಉತ್ತಮ ಜನ್ಮ ಬಂದಾಗ ಧರ್ಮಮಾರ್ಗದಿಂದ ಕರ್ಮಗಳನ್ನು ಅವಶ್ಯ ಮಾಡಬೇಕು. ಹಾಗೆ ಮಾಡದೇ ಇದ್ದಾಗ ಮುಂದೆ ದರಿದ್ರನಾಗಿ ಹುಟ್ಟಿ ಪಾಪಕರ್ಮ ಮಾಡುತ್ತಾನೆ. ತತ್ಪರಿಣಾಮವಾಗಿ ಇನ್ನು ನೀಚ ಯೋನಿಗಳಲ್ಲಿ ಹುಟ್ಟಿ ಮತ್ತಷ್ಟು ಪಾಪಕರ್ಮ ಮಾಡಿ ನಾಶಹೊಂದುತ್ತಾನೆ.

ಇನ್ನೊಂದು ಅರ್ಥ : ಬೇರೆ ಕಡೆ ಮಾಡಿದ ಜ್ಞಾತ ಅಜ್ಞಾತ ಪಾಪಕೃತ್ಯಗಳು ಪುಣ್ಯಕ್ಷೇತ್ರಗಳೆಂದೆನಿಸಿದ ಕಾಶಿ, ಗಯಾ, ಪ್ರಯಾಗ, ಬದರೀ, ರಾಮೇಶ್ವರ ಇತ್ಯಾದಿಗಳಲ್ಲಿಯೂ ಪಾಪಕರ್ಮ ಮಾಡಿದರೆ ಆ ಪಾಪದ ಫಲವನ್ನು ಅನಂತವಾಗಿ ಅನುಭವಿಸುತ್ತಾನೆ. ಇದಕ್ಕೆ ಕೊನೆಯೇ ಇಲ್ಲದಂತಾಗುವುದು.

Among the Great World Wars since B.C. to 1943 A.D., the following are famous wars recorded in history.

(1) In Greece there were three independent States namely (a) Sparta (b) Athens and (c) Troy. These were billigrent war mongering city states each with a king, soldiers and forts. But due to a mistaken love story Sparta and Athens unitedly attacked Troy. In the end Troy was totally obliterated from the map. It was a long story during 3rd century B.C. Athens reduced into district. Now none of the States exist except its Ruins and a few descendents.

(2) Next was Rome (Italy). Italy had almost four independent quarreling states. Rome was powerful. But was a Republic in the ancient



days. Romagna Peru were the other States. Romes history goes back to 3rd century or so. Julius Ceaser, Cassivs, Brutus were important characters. Rome later became Monarchy. Cleopatra was a powerful queen. Rome fought many battles against small states particularly Sea kingdoms like Cyprus in Mediterranean Sea. To South was another autocracy. Their ruler with Egypt as kingdom, kings were called Pharo (emperor). They declared themselves as Gods on earth.

Egypt : Fought many battles with Rome, Cyria and Palestine who were jews by religion. Egypt conquered Cyria and Palestine (Jesus were born here - Jerusalem) Jews were taken as prisoners and were made slaves for a century. Till about 1 B.C., they were freed and were taken back to Jerusalem (Palestine). Egypt was later conquered by Romans. The Egyptian population was entirely wiped out. At about this period between 1 B.C. and 1 A.D., christianity became a religion. Jesus Christ revolted against Jews. They with the help of Romans charged Jesus as a Blasphoner and sentenced and finally was crucified.

Since then, he became a messia (Prophet) and his teachings came to be accepted as faith. But Romans prosecuted and killed many believers in a heinious way. This war went on for nearly 7 centuries. Prophet Mohammed started Islam in 7th century A.D. at Mecca. His followers Muslims were billigerent, intolerant of other faiths. By now, Rome became extinct as an empire. Far in the east, India underwent numerous events in the Indian sub-continent experienced a number of petty small kingdoms particularly in Punjab where nearly 35 kings ruled and quarelled each other. Alexander with his strong army conquered Punjab, Afghanistan, Iran etc. Hirat, Kandahar, Gedrosia became Greek colonies.

Mauryan dynasty ruled for nearly 360 years. Chandragupta Maurya was famous historical king. Their empire was from Himalayas to Vindhyas in the South. Ashoka's period witnessed the extinction of Kalinga (Orissa). Later his non-war brought to front Gupta's rule.

In the South, Pandyas Chedis Cheras, Salivahanas (Satavahanas), Kadambas, were equally fighting among themselves.

Muslim rule started with Ghazni and Chengiz Khan. These demons went on killing in war ruthlessly in North India. Muslims established their first Muslim rule at Agra. Later Delhi (Hastinapur) became the capital. But wars never ceased. Conversions took place. Islam became popular. In Maharashtra, Shivaji established Hindu State but did not continue for long.

By now, English East India Company made its headway with Kerala as base. English started medalling in Indian politics and took advantage of annexing one Indian State after another. They took advantage of mutual acrimonies of kings and Sultans and gradually spread their evil design of establishing British empire from Kashmir to South. Thus through wars treachery deceipt India not only lost its sovereignity but also innumerable human lives.

The same can be said of South Africa, Europe, Germany, Turkey. England and France engulfed themselves in a prolonged war famous as 100 years war.

Then Muslims and Christians fought between themselves for 7 years called eight crusade war.

Thus war battle have been there since pre-Christian era. Arnold J. Toynbee renowned historian has rightly said that since the inception of humanity in the world the people sacrificed during the wars. If counted he says, another world could have been created. What a loss of manking. **Man killed man. - Emigmatic mysteries of History.**

Typesetting by
**Sri Raghavendra Enterprises**
BSK 1st Stage, Bangalore-560 050
Phone : 22421294